ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ವೇದಾಂತವೂ ಆಧುನಿಕಜನಜೀವನವೂ

ಬರೆದವರು :

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೮೭

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

1994

# ಬಿನ್ನಹ

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಬೆಂಗಳೂರಿನ ಶ್ರೀಚಾಮರಾಜೇಂದ್ರಸಂಸ್ಕೃತಮಹಾಪಾಠಶಾಲೆಯಲ್ಲಿ 1954ರಲ್ಲಿ ಮಾಡಿದ ಮೂರು ಉಪನ್ಯಾಸಗಳಿವು. ವೇದಾಂತದಿಂದ ಆಧುನಿಕಜನಜೀವನಕ್ಕೆ ಏನಾದರೂ ಪ್ರಯೋಜನವು ದೊರಕುವಂತಿದೆಯೆ ?– ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ.

ವೇದಾಂತವಿಚಾರಕ್ಕೂ ಲೌಕಿಕಜೀವನಕ್ಕೂ ಪರಸ್ಪರಸಂಬಂಧವೇನೂ ಇಲ್ಲವೆಂದೇ ಅನೇಕರು ಭಾವಿಸಿರುತ್ತಾರೆ. ಆದರೆ ಶ್ರೀಶ್ರೀಗಳವರು ಈ ಉಪನ್ಯಾಸಗಳಲ್ಲಿ ಲೌಕಿಕಜೀವನವು ಕೇವಲ ಭೌತಿಕವಿಜ್ಞಾನದ ಬೆಳವಣಿಗೆಯಿಂದಲೇ ಸುಖಮಯವಾಗುವದಿಲ್ಲವೆಂದೂ ಎಲ್ಲಾ ದೇಶ, ಎಲ್ಲಾ ಕಾಲಕ್ಕೂ ಅಧ್ಯಾತ್ಮವಿದ್ಯೆಯಿಂದಲೇ ನಿಜವಾದ ಸುಖಪ್ರಾಪ್ತಿಯಾದೀತೆಂದೂ ನವನಾಗರಿಕತೆಗೆ ಮರುಳಾಗಿ ವೇದಾಂತಜ್ಞಾನವನ್ನು ಕಡೆಗಣಿಸಿ ಪಶ್ಚಾತ್ತಾಪಪಡುವಂತೆ ಆಗಬಾರದೆಂದೂ ಇಲ್ಲಿ ಹಿತವಚನಗಳನ್ನು ನೀಡಿದ್ದಾರೆ.

ಈ ಗ್ರಂಥಪ್ರಕಟನೆಗೆ ಕೆಳಗೆ ಕಂಡಂತೆ ಸಹಾಯದ್ರವ್ಯವನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

| ಶ್ರೀಗಳಾದ :– | ರೂ. ಪೈ. |
|---|---|
| ೧. ಎಸ್. ಎಸ್. ಸಿದ್ದಪ್ಪನವರು, ರಾಜಾಜಿನಗರ, ಬೆಂಗಳೂರು. | ೧೦೦೦–೦೦ |
| ೨. ಎಸ್. ಕೃಷ್ಣಮ್ಮನವರು, ಶಂಕರಪುರಂ, ಬೆಂಗಳೂರು. | ೧೦೦೦–೦೦ |
| ೩. ಎಸ್. ಆರ್. ಶಾರದಾ, ಎನ್. ಆರ್. ಕಾಲೋನಿ, ಬೆಂಗಳೂರು. | ೫೦೦–೦೦ |
| ೪. ಟಿ. ಎಸ್. ವೆಂಕಟಾಚಲಪತಿಜೋಯಿಸರು, ತುಮಕೂರು | ೨೦೦–೦೦ |
| ಒಟ್ಟು ರೂ. | ೨,೭೦೦–೦೦ |

ಜನಪ್ರಿಯವಾಗಿದ್ದ ಈ ಪುಸ್ತಕದ ಪ್ರತಿಗಳು ಮಾರಾಟವಾಗಿ ಹೋಗಿದ್ದುದರಿಂದ ಮತ್ತೊಮ್ಮೆ ಈಗ ಮುದ್ರಿಸಿ ಪ್ರಕಟಿಸಲಾಗಿದೆ. ವಾಚಕರು ಎಂದಿನಂತೆ ಈ ಗ್ರಂಥವನ್ನೂ ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಇತಿ–ಸಜ್ಜನವಿಧೇಯ,

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**

ತಾ|| 10–7–1994

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ವಿಷಯಾನುಕ್ರಮಣಿಕೆ

ಸಂಖ್ಯೆಗಳು ಪುಟಗಳನ್ನು ಸೂಚಿಸುವವು.

## ೧. ವೇದಾಂತವೇ ನಾಗರಿಕತೆಗೆ ಮದ್ದು

ವೇದಾಂತದ ಪ್ರಾಮಾಣ್ಯ (೧) ವೇದಾಂತಕ್ಕೆ ಸಾರ್ವತ್ರಿಕಾನುಭವವೇ ತಳಹದಿ (೨) ನಾಗರಿಕತೆ ಎಂಬುದೊಂದು ರೋಗ (೩) ರೋಗನಿದಾನ (೪) ರೋಗಲಕ್ಷಣಗಳು (೫) ನಮ್ಮ ವ್ಯವಹಾರದ ಸ್ವರೂಪ (೬) ಸಂಪತ್ತು ಸ್ಥಿರವಲ್ಲ (೧ ) ಕಾಮಾದಿಗಳೂ ಅವುಗಳಿಗೆ ಪ್ರತೀಕಾರವೂ (೧೨)

## ೨. ವೇದಾಂತದೃಷ್ಟಿಯಿಂದಾಗುವ ಲಾಭ

ಯಂತ್ರಗಳಿಂದಾಗಿರುವ ಅನರ್ಥ (೧೫) ನಾಗರಿಕತೆಯು ನರಕವಾಗಿದೆ (೧೬) ಜ್ಞಾನಿಗಳಿಂದಾಗಬಹುದಾದ ಸಹಾಯ (೧೭) ವೇದಾಂತಿಗಳ ದೃಷ್ಟಿ (೨೦) ಶ್ರದ್ಧೆಯಿಂದಾಗುವ ಸತ್ಫಲ (೨೩) ಬ್ರಹ್ಮದ ಅಪರೋಕ್ಷಜ್ಞಾನ (೨೫) ಅಧ್ಯಾತ್ಮಸಾಧನಗಳು (೨೭) ಬ್ರಹ್ಮಾನಂದಾನುಭವಕ್ಕೆ ಎಲ್ಲರಿಗೂ ಹಕ್ಕು

## ೩. ಸರ್ವವೂ ಬ್ರಹ್ಮಮಯ

ಹಿಂದೆ ಹೇಳಿರುವುದರ ಸಾರ (೩೨) ಎರಡು ದೃಷ್ಟಿಗಳು (೩೫) ಭಗವಂತನೇ ಎಲ್ಲಾ ಜ್ಞಾನಕ್ರಿಯೆಗಳ ಮೂಲವು (೩೬) ಪ್ರತ್ಯಗ್ದೃಷ್ಟಿಯುಳ್ಳವರ ವ್ಯವಹಾರ (೪೧)

|| ಓಮ್ ||

# ವೇದಾಂತವೂ ಆಧುನಿಕಜನಜೀವನವೂ

## ೧. ವೇದಾಂತವೇ ನಾಗರಿಕತೆಗೆ ಮದ್ದು

(16-2-54)

### ವೇದಾಂತದ ಪ್ರಾಮಾಣ್ಯ

ವೇದಾಂತದರ್ಶನ ಎಂಬುದು ಉಪನಿಷತ್ತಿನಿಂದ ಹುಟ್ಟಿದ ಒಂದಾನೊಂದು ಸಿದ್ಧಾಂತವು. ಮಿಕ್ಕ ಸಿದ್ಧಾಂತಗಳೆಂಬಿವು ಬಲುಮಟ್ಟಿಗೆ ಬರಿಯ ತತ್ತ್ವಶಾಸ್ತ್ರಗಳಾಗಿರುತ್ತವೆ ; ಎಂದರೆ ಅವು ಪೂರ್ವಾಪರವಿರೋಧವಿಲ್ಲದಂತೆ ತರ್ಕಬದ್ಧವಾಗಿ ಏರ್ಪಡಿಸಿದ ್ರಗಳಾಗಿರುತ್ತವೆ. ಅಂಥ ಕ್ರಮಬದ್ಧವಾಗಿರುವ ಶಾಸ್ತ್ರಗಳನ್ನು ಇಂಗ್ಲಿಷ್‌ನಲ್ಲಿ (Philosophy) ಫಿಲಾಸೊಫಿ ಎಂದು ಕರೆಯುತ್ತಾರೆ. ಆದರೆ ನಮ್ಮ ದೇಶದಲ್ಲಿ ಅನುಭವಕ್ಕೇ ಹೆಚ್ಚು ಬೆಲೆ. ಆದ್ದರಿಂದ ಅನುಭವಾನುಸಾರವಾಗಿ ಕೆಲವು ಋಷಿಗಳು ಏರ್ಪಡಿಸಿರುವ ಸಿದ್ಧಾಂತಗಳನ್ನೇ 'ದರ್ಶನ' (ತಾನು ಕಂಡದ್ದು) ಎಂಬ ಹೆಸರಿನಿಂದ ಕರೆದಿರುತ್ತದೆ. ಆಯಾ ಋಷಿಗಳು ತಮ್ಮತಮ್ಮ ದರ್ಶನವನ್ನು ಅನುಭವಾನುಸಾರಿಯೆಂದೇ ಜನರ ಮುಂದೆ ಇಟ್ಟಿರುತ್ತಾರೆ. ವೇದಾಂತದಲ್ಲಿ ಉಪನಿಷತ್ತಿನ ಋಷಿಗಳಿಗೆ ಅನುಭವಕ್ಕೆ ಬಂದ ಸಿದ್ಧಾಂತವನ್ನು ಇಟ್ಟಿದೆ. ವೇದಾಂತಿಗಳು ತಮ್ಮ ದರ್ಶನವನ್ನು ಉಪನಿಷತ್ತುಗಳಲ್ಲಿ ಹೇಳಿದೆ ಎಂಬ ಕಾರಣದಿಂದ, ಕೇವಲ ವಾಕ್ಯವಿಶ್ವಾಸದಿಂದಲೇ, ಇದು ನಂಬತಕ್ಕದ್ದಾಗಿದೆ ಎನ್ನುವದಿಲ್ಲ. ಈ ವಿಷಯಕ್ಕೆ ಶ್ರೀಶಂಕರಾಚಾರ್ಯರ ಶಿಷ್ಯರಾದ ಸುರೇಶ್ವರಾಚಾರ್ಯರು ತಮ್ಮ ವಾರ್ತಿಕದಲ್ಲಿ ಬರೆದಿರುವದೇನೆಂದರೆ : **"ನ ಚ ವೇದೋಕ್ತಿತೋ ವೇದಃ ಶ್ರದ್ಧೇಯಾರ್ಥ ಇಹೇಷ್ಯತೇ । ಕಿಂ ತ್ವಮಾನತ್ವಹೇತೂನಾಂ ವೇದವಾಕ್ಯೇಷ್ವಸಂಭವಾತ್॥"** (ಬೃ. ವಾ. ೨-೪-೩೭೫) ವಿಷಯವನ್ನು ತಿಳಿಸದಿರುವದು, ಸಂಶಯಿತವಾಗಿ ತಿಳಿಸುವದು, ಅಥವಾ ಬಾಧಿತವಾಗಿ

ತಿಳಿಸುವದು ಅಪ್ರಮಾಣವೆನಿಸುತ್ತದೆ. ಹೀಗಲ್ಲದೆ ಅಜ್ಞಾತವಾಗಿರುವದನ್ನು ನಿಃಸಂದಿಗ್ಧವಾಗಿ ಅನುಭವವುಂಟಾಗುವಂತೆ ತಿಳಿಸುವದಾದರೆ ಅದಕ್ಕೆ ಪ್ರಮಾಣವೆಂದು ಹೆಸರು. ಉಪನಿಷದ್ವಾಕ್ಯವು ಹೀಗೆ ಅನುಭವಕ್ಕೆ ಬರುವಂತೆ ತನ್ನ ವಿಷಯವನ್ನು ತಿಳಿಸುವದರಿಂದಲೇ ಪ್ರಮಾಣವೆನಿಸುತ್ತದೆ ಎಂಬುದು ವೇದಾಂತಿಗಳ ಹೇಳಿಕೆ.

## ವೇದಾಂತಕ್ಕೆ ಸಾರ್ವತ್ರಿಕಾನುಭವವೇ ತಳಹದಿ

ಭೌತಿಕವಿಜ್ಞಾನಶಾಸ್ತ್ರದಲ್ಲಿ ಕೆಲವರು ಅರ್ಥಕ್ರಿಯಾಸಾಧಕವಾದರೆ, ವ್ಯವಹಾರದಲ್ಲಿ ಪ್ರಯೋಜನಕರವಾದ ಅಬಾಧಿತವಾದ ತಿಳಿವಳಿಕೆಯನ್ನು ಕೊಟ್ಟರೆ, ಅಂಥ ಕಲ್ಪನೆಯನ್ನು ಸಿದ್ಧಾಂತವೆನ್ನಬಹುದು ಎಂದು ಅನ್ನುತ್ತಾರೆ. ಭೂಮಿಯು ಸೂರ್ಯನ ಸುತ್ತಲೂ ತಿರುಗುತ್ತದೆ ಎಂಬುದು ಈಚೆಗೆ ಕೆಲವರು ಜ್ಯೋತಿಷ್ಕರು ಮಾಡಿಕೊಂಡಿರುವ ಕಲ್ಪನೆ; ಸೂರ್ಯನು ಭೂಮಿಯ ಸುತ್ತಲೂ ತಿರುಗುತ್ತಾನೆ ಎಂಬುದಕ್ಕಿಂತ ನಮಗೆ ಗೊತ್ತಿರುವ ಎಲ್ಲಾ ಘಟನೆಗಳನ್ನೂ ಈ ಕಲ್ಪನೆಯು ಹೆಚ್ಚು ತೃಪ್ತಿಕರವಾಗಿ ವಿವರಿಸಬಲ್ಲದಾದ್ದರಿಂದ ಇದನ್ನೇ ಈಗಿನವರು ಸಿದ್ಧಾಂತವೆಂದು ಕರೆಯುತ್ತಾರೆ. ಹೀಗೆಯೇ ಮಂಗಳ ಗ್ರಹದಲ್ಲಿ ಜನರು ವಾಸವಾಗಿದ್ದಾರೆ ಎಂಬ ಕಲ್ಪನೆಯೂ ಒಂದು ಸಿದ್ಧಾಂತವಾಗುವದರಲ್ಲಿರುವ ಕಲ್ಪನೆಯೆನ್ನಬಹುದು. ಅನೇಕ ಕಾರಣಗಳಿಂದ ಇದು ಸರಿಯೆಂದು ಸಂಭಾವದಾಯುಕ್ತಿಯಿಂದ ಸಿದ್ಧವಾದರೆ, ನಮ್ಮ ಯಾವ ಅನುಭವಕ್ಕೂ ಈ ಕಲ್ಪನೆಯಿಂದ ಧಕ್ಕೆ ಬಾರದೆ ಇದ್ದರೆ, ಅದೊಂದು ವ್ಯಾವಹಾರಿಕಸಿದ್ಧಾಂತವಾಗಬಹುದೆಂಬುದು ಈ ವಿಚಾರಕರ ಭಾವ. ಆದರೆ ವೇದಾಂತವು ಸಿದ್ಧಾಂತವೆಂದರೆ ಹೀಗಲ್ಲ. ಅದು ಯಾವದೊಂದು ವ್ಯವಹಾರಕ್ಕಾದರೂ ಹೊಂದಿಕೊಂಡು ಇರಬೇಕೆಂಬ ತತ್ತ್ವವನ್ನೇನೂ ತಿಳಿಸಬೇಕಾದದ್ದಿಲ್ಲ ; ಏಕೆಂದರೆ ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ತಿಳಿಯುವದಕ್ಕೆ ಆಗದೇ ಇರುವ ತತ್ತ್ವವನ್ನೇ ವೇದಾಂತವು ತಿಳಿಸುತ್ತದೆ. ಆದರೆ ಅನುಭವದಲ್ಲಿರುವ ತತ್ತ್ವವನ್ನೇ, ತಿಳಿಸುತ್ತದೆ ಎಂಬುದು ಅದರಲ್ಲಿರುವ ಒಂದು ವಿಶೇಷ.

ಉಪನಿಷತ್ತುಗಳನ್ನು ರಚಿಸಿದವರು ಯಾರು ? ಅದನ್ನು ಯಾವಾಗ ರಚಿಸಲಾಯಿತು ? ಎಂಬಿದೇ ಮುಂತಾದದ್ದು ಐತಿಹಾಸಿಕದೃಷ್ಟಿಯಿಂದ

ವಿಚಾರಣೀಯವಾಗಿರಬಹುದಾದರೂ ತತ್ತ್ವದ ನಿರ್ಣಯಕ್ಕೆ ಅದೇನೂ ಮುಖ್ಯವಲ್ಲ. ಏಕೆಂದರೆ ವೇದಾಂತದಲ್ಲಿ ಪ್ರತ್ಯಕ್ಷನಿರೀಕ್ಷಣೆಯಿಂದ ಗೊತ್ತು ಪಡಿಸಬಹುದಾದ ವಿಷಯವನ್ನಾಗಲಿ ತರ್ಕದಿಂದ ನಿಶ್ಚಯಿಸಬಹುದಾದ ವಿಷಯವನ್ನಾಗಲಿ ಹೇಳಿರುವದಿಲ್ಲ; ಅಥವಾ ಹೇಳಿದವರ ಯೋಗ್ಯತೆಯ ಮೇಲೆ ನಾವು ನಂಬತಕ್ಕ ವಿಷಯವನ್ನೂ ಅಲ್ಲಿ ಹೇಳಿರುವದಿಲ್ಲ. ಅದರಲ್ಲಿ ದೇಶಕಾಲಗಳ ನಿಯಮವಿಲ್ಲದೆ ಸಾರ್ವತ್ರಿಕವಾದ ಅನುಭವವನ್ನು ಅವಲಂಬಿಸಿರುವ ಪರಮಾರ್ಥದ ವಿಚಾರವಿರುತ್ತದೆ. ವ್ಯವಹಾರದಲ್ಲಿ ಗಣಿತಶಾಸ್ತ್ರದ ಸಿದ್ಧಾಂತಗಳು ಹೇಗೆ ಸರ್ವದೇಶಕಾಲಗಳಿಗೂ ಅನ್ವಯಿಸುವವಾಗಿರುವವೋ ಹಾಗೆಯೇ ಪರಮಾರ್ಥವಿಚಾರದಲ್ಲಿ ವೇದಾಂತಸಿದ್ಧಾಂತವೂ ಸಾರ್ವತ್ರಿಕಾನುಭವಕ್ಕೆ ಹೊಂದುವ ವಿಷಯವನ್ನೇ ತಿಳಿಸುತ್ತದೆ.

## ಪ್ರಕೃತ ವಿಚಾರದ ವಿಷಯ

ಈ ಉಪನ್ಯಾಸಮಾಲಿಕೆಯಲ್ಲಿ ನಾನು 'ವೇದಾಂತವೂ ಆಧುನಿಕ ಜನಜೀವನವೂ' ಎಂಬ ವಿಷಯವನ್ನು ಕುರಿತು ಮಾತನಾಡುವವನಿರುತ್ತೇನೆ. ವೇದಾಂತವು ನಮ್ಮಗಳ ಅನುಭವಕ್ಕೆ ಬರುವಂಥ ವಿಷಯಗಳನ್ನೇ ತಿಳಿಸುತ್ತದೆ. ಅದು ಈಗಿನ ಜನಜೀವನಕ್ಕೂ ಉಪಯುಕ್ತವಾದ ವಿಷಯಗಳನ್ನು ತಿಳಿಸುತ್ತದೆ ಎಂಬಿದನ್ನು ತಮ್ಮ ಮುಂದೆ ಇಡುವದು ನನ್ನ ಮುಖ್ಯೋದ್ದೇಶವಾಗಿರುತ್ತದೆ. ಈಗಿನ ಜನಜೀವನವು ಹೇಗಿದೆ? ಈ ನವನಾಗರಿಕತೆಯ ಜನರ ಜಟಿಲಸಮಸ್ಯೆಗಳಿಗೆ ವೇದಾಂತದಲ್ಲಿ ಪರಿಹಾರವನ್ನು ಕಾಣಬಹುದೆ?—ಎಂಬಿದನ್ನು ನಾವು ಲಕ್ಷ್ಯವಿಟ್ಟು ವಿಚಾರಮಾಡಬೇಕು.

## ನಾಗರಿಕತೆ ಎಂಬುದೊಂದು ರೋಗ

ನಾವು ನಾಗರಿಕತೆ ಎಂದು ಕೊಚ್ಚಿಕೊಳ್ಳುತ್ತಿರುವದನ್ನು ತತ್ತ್ವವಿಚಾರಕರು ಒಂದು ಬಗೆಯ ರೋಗವೆಂದು ಕರೆದಿರುತ್ತಾರೆ. ನಮ್ಮ ದೇಶದ ವೇದಾಂತಿಗಳು ಮಾತ್ರ ಹೀಗೆಂದಿದ್ದಾರೆ, ಆದ್ದರಿಂದ ಇದು ಅವರ ಅವಿಜ್ಞತೆಯ ಗುರುತು—ಎಂದು ನೀವು ಭಾವಿಸಬಾರದು. ಏಕೆಂದರೆ ನಾನು ಹೀಗೆಂದು ಹೇಳುತ್ತಿರುವದು ಒಬ್ಬಾನೊಬ್ಬ ಪಾಶ್ಚಾತ್ಯಗ್ರಂಥಕರ್ತನ ಬರವಣಿಗೆಯ

ಆಧಾರದಿಂದ. ಎಡ್ವರ್ಡ್‌ಕಾರ್ಪೆಂಟರ್ ಎಂಬಾತನೊಬ್ಬ ಸ್ವತಂತ್ರವಿಚಾರಕನು ಇಂಗ್ಲೆಂಡಿನಲ್ಲಿ ಆಗಿಹೋಗಿರುತ್ತಾನೆ. ಆತನು 'ನಾಗರಿಕತೆ, ಅದರ ನಿದಾನ, ಮತ್ತು ಚಿಕಿತ್ಸೆ (Civilization, Its Cause and Cure) ಎಂಬರ್ಥದ ಹೆಸರಿನಿಂದ ಒಂದು ಇಂಗ್ಲಿಷು ಪುಸ್ತಕವನ್ನು ಬರೆದಿರುತ್ತಾನೆ. ಆತನು ಹೇಳುವದೇನೆಂದರೆ, ನಾಗರಿಕತೆ ಎಂಬುದು ಒಂದೊಂದು ಜನಾಂಗಕ್ಕೂ ಬಾಲ್ಯಾವಸ್ಥೆಯಲ್ಲಿ ಬರುವ ಒಂದಾನೊಂದು ರೋಗವು. ಚಿಕ್ಕಮಕ್ಕಳಿಗೆ ನಾಯಿಕೆಮ್ಮು, ಸೀತಾಳಸಿಡಿಬು ಮುಂತಾದ ಹಲವು ರೋಗಗಳು ಬರುತ್ತವೆ; ಆ ರೋಗಗಳಿಗೆ ತುತ್ತಾಗುವ ಮಕ್ಕಳು ಬಹಳವಾಗಿರುವದರಿಂದ ವೈದ್ಯರುಗಳು ಮಕ್ಕಳ ರೋಗಗಳ ವಿಚಾರವನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕಾಗಿರುತ್ತದೆ. ಇದರಂತೆ ಜನಾಂಗಗಳು ಬೆಳೆಯುತ್ತಿರುವಾಗ ಅವಕ್ಕೆ ಬಾಲ್ಯದಲ್ಲಿಯೇ 'ನಾಗರಿಕತೆ' ಎಂಬ ಒಂದು ರೋಗವು ಬರುತ್ತದೆ. ಯಾವ ಜನಾಂಗಗಳು ಅದರ ನಿದಾನವನ್ನು ಅರಿತುಕೊಂಡು ತಕ್ಕ ಚಿಕಿತ್ಸೆಯನ್ನು ಪಡೆಯುವವೋ ಅವು ಮುಂದಕ್ಕೂ ಉಳಿದುಕೊಳ್ಳುವವು. ಆದರೆ ಯಾವ ಜನಾಂಗಗಳು ಈ ರೋಗವನ್ನು ಅಸಡ್ಡೆಯಿಂದ ಕಾಣುವವೋ ಅವು ಇದಕ್ಕೆ ಬಲಿಯಾಗುವವು. ಈ ಅಭಿಪ್ರಾಯವನ್ನು ಕಾರ್ಪೆಂಟರನು ಅನೇಕ ಅಂಕೆ ಅಂಶಗಳನ್ನು ಕೊಟ್ಟು ಸಿದ್ಧಪಡಿಸಿ ತೋರಿಸುವ ಪ್ರಯತ್ನವನ್ನು ಮಾಡಿರುತ್ತಾನೆ.

## ರೋಗನಿದಾನ

ಈ ಗ್ರಂಥಕರ್ತನ ಅಭಿಪ್ರಾಯದಲ್ಲಿ ನಾಗರಿಕತೆ ಎಂಬ ರೋಗಕ್ಕೆ ನನ್ನದು ಎಂಬ ಭಾವನೆ (The Idea of property)ಯು ಬಲವಾಗುವದೇ ಕಾರಣವು; ವಿವೇಕಿಗಳಾದವರು ಈ ಚಿಹ್ನೆಗಳನ್ನು ಕಂಡು ರೋಗಕ್ಕೆ ತಕ್ಕ ಮದ್ದನ್ನು ಮಾಡಿಕೊಳ್ಳಬೇಕು. ಅನಾಗರಿಕರೆಂದು ನಾವು ಜರೆಯುತ್ತಿರುವ ಜನಗಳ ಗುಂಪಿನಲ್ಲಿ ಈ ರೋಗವಾಗಲಿ ಅದರ ದುರ್ಲಕ್ಷಣಗಳಾಗಲಿ ಕಾಣಿಸುವದಿಲ್ಲ. ಆದರೆ ಮಾನವನು ಒಂದಲ್ಲದಿದ್ದರೆ ಒಂದು ದಿನ ಈ ರೋಗವನ್ನು ಅನುಭವಿಸಲೇಬೇಕಾಗುತ್ತದೆ. ಈ ರೋಗವು ಬರಲೇಬಾರದೆಂದರೆ ಆಗದ ಮಾತು; ಅದಕ್ಕೆ ತಕ್ಕ ಚಿಕಿತ್ಸೆಮಾಡಿಕೊಂಡೇ ಜನಾಂಗಗಳು ಮುಂದುವರಿಯಬೇಕಾಗಿದೆ. ಹೀಗೆ ಯಶಸ್ವಿಯಾಗಿ ಚಿಕಿತ್ಸೆಮಾಡಿಕೊಂಡವ

ರಲ್ಲಿ ಭಾರತದೇಶದವರೂ ಚೀನಾದೇಶದವರೂ ಉದಾಹರಣೀಯರಾಗಿರು ತ್ತಾರೆ- ಎಂದು ಕಾರ್ಪೆಂಟರನು ಬರೆದಿರುತ್ತಾನೆ. ಆದರೆ ಈಗ ನೋಡುವಲ್ಲಿ ಈ ರೋಗವು ಮತ್ತೆ ಈ ಜನಾಂಗಗಳಲ್ಲಿ ಮರುಕಳಿಸಿರುವಂತೆ ಕಾಣುತ್ತಿದೆ. ಆದ್ದರಿಂದ ಭರತಖಂಡದವರಾದ ನಾವು ಅದರ ಲಕ್ಷಣಗಳನ್ನು ಮತ್ತಷ್ಟು ಲಕ್ಷ್ಯವಿಟ್ಟು ವಿಚಾರಿಸಬೇಕಾದದ್ದು ಅವಶ್ಯವಾಗಿರುತ್ತದೆ.

## ನಾಗರಿಕತೆಯ ಚಿಕಿತ್ಸೆಗೆ ವೇದಾಂತವೆ?

ವೇದಾಂತದಲ್ಲಿ ಈ ರೋಗಕ್ಕೆ ಚಿಕಿತ್ಸೆಯಿದೆಯೆ ? ಈ ಚಿಕಿತ್ಸೆಯು ರೋಗವನ್ನು ಆತ್ಯಂತಿಕವಾಗಿ ನಾಶಮಾಡೀತೇನು ?- ಎಂಬದು ಇನ್ನೊಂದು ಪ್ರಶ್ನೆ. ಏಕೆಂದರೆ ವೈದ್ಯಶಾಸ್ತ್ರವು ನಿಯತವಾಗಿ ರೋಗಪರಿಹಾರಕವಾಗಿರುವ ಚಿಕಿತ್ಸೆಗಳನ್ನೇ ಹೇಳುವದಿಲ್ಲ ; ಕೆಲವು ರೋಗಗಳು ಚಿಕಿತ್ಸೆಯನ್ನು ಮಾಡಿದ ಮೇಲೂ ಹೋಗದೆ ಇರುವದುಂಟು, ಇದರಂತೆ ವೇದಾಂತದಲ್ಲಿ ಸೂಚಿಸುವ ಅನುಷ್ಠಾನವೂ ನಿಯಮದಿಂದ ಈ ರೋಗವನ್ನು ಪರಿಹಾರಮಾಡದೆ ಇರ ಬಹುದಲ್ಲ !-ಎಂಬ ಶಂಕೆಯೂ ಉಂಟಾಗಬಹುದು. ಆದರೆ ಒಬ್ಬೊಬ್ಬನ ಶರೀರಪ್ರಕೃತಿಯನ್ನು ನೋಡಿ ಮಾಡುವ ಚಿಕಿತ್ಸಾಪ್ರಕಾರಕ್ಕೂ ಸಾರ್ವತ್ರಿ ಕಾನುಭವದ ಆಧಾರದಿಂದ ತಿಳಿಸುವ ವೇದಾಂತಚಿಕಿತ್ಸೆಗೂ ಬಹಳ ಅಂತರ ವುಂಟು. ಆದ್ದರಿಂದ ವೇದಾಂತಿಗಳು ಹೇಳುವ ತತ್ತ್ವವು ಸಾರ್ವತ್ರಿಕಾನು ಭವದ ಆಧಾರದಮೇಲೆ ನಿಂತಿದೆಯೆಂದೂ ಅದನ್ನು ವಿಶ್ವಾಸದಿಂದ ಅನುಸರಿಸು ವವರಿಗೂ ಪ್ರಯೋಜನವುಂಟೆಂದೂ ತೋರಿಸಿಕೊಟ್ಟರೆ ಸಾಕಾಗಿರುತ್ತದೆ.

## ರೋಗದ ಲಕ್ಷಣಗಳು

ಇದಿರಲಿ, ಪ್ರಕೃತವಾಗಿರುವ ನಾಗರಿಕತೆ ಎಂಬ ರೋಗದ ಲಕ್ಷಣಗಳನ್ನು ಸ್ವಲ್ಪ ವಿಚಾರಮಾಡೋಣ. ಮೇಲಾಟವೆಂಬುದು ಇದರ ಮೊದಲನೆಯ ಚಿಹ್ನವು. ಮಿಕ್ಕವರನ್ನೆಲ್ಲ ಹಿಂದಕ್ಕೆ ತಳ್ಳಿ ನಾನೇ ಮುಂದಕ್ಕೆ ಹೋಗಬೇಕು ಎಂಬುದು ಈ ನಾಗರಿಕತೆಯ ಹೆಗ್ಗುರುತು. ಈಗ ಎಲ್ಲೆಲ್ಲಿ ನೋಡಿದರೂ ನಾನು ಮುಂದು, ತಾನು ಮುಂದು- ಎಂದು ಮುನ್ನುಗ್ಗುವ ವ್ಯಕ್ತಿಗಳು, ಕುಟುಂಬಗಳು, ಗ್ರಾಮಗಳು, ಜಿಲ್ಲೆಗಳು, ದೇಶಗಳು, ರಾಷ್ಟ್ರಗಳು- ಇವೇ

ಕಾಣಿಸುತ್ತಿವೆ. ಕಾಮಿಸಬಹುದಾದ ವಸ್ತುಗಳೂ ದಿನದಿನಕ್ಕೂ ಹೆಚ್ಚಾಗುತ್ತಿರುತ್ತವೆ; ಆದರೆ ಒಂದೊಂದು ವಸ್ತುವಿನಲ್ಲಿಯೇ ಅನೇಕರಿಗೆ ಇಚ್ಛೆಯುಂಟಾಗುತ್ತಿದೆಯಾದ್ದರಿಂದ ಇಲ್ಲಿ ಪೈಪೋಟಿಯುಂಟಾಗುವದು ಸಹಜವಾಗಿದೆ. ಪೈಪೋಟಿಯ ನಿಮಿತ್ತದಿಂದ ಜನರು ವೇಗದಿಂದ ಕೆಲಸಮಾಡಬೇಕಾಗಿದೆ. ನಾವು ಹೋಗುವಷ್ಟರಲ್ಲಿ ಯಾರು ಅದೇ ವಸ್ತುವನ್ನು ತೆಗೆದುಕೊಂಡುಬಿಡುವರೋ ಎಂದು ಅವಷ್ಟುಬೇಗ ವಸ್ತುಜ್ಞಾನವನ್ನು ಮಾಡಿಕೊಂಡು, ಬೇಗನೆ ಅದನ್ನು ಅನುಭವಿಸಿಬಿಡಬೇಕಾಗಿದೆ. ಇದಕ್ಕಾಗಿ ವೇಗವಾಗಿ ಓಡುವದಕ್ಕೆ ಸಹಾಯಕವಾದ ರೈಲು ಮುಂತಾದವುಗಳು, ದೂರದಿಂದಲೇ ಮಾತನಾಡುವದಕ್ಕೆ ಸಹಾಯಕವಾದ ಟೆಲಿಫೋನು, ದೂರದಿಂದಲೇ ನೋಡುವದಕ್ಕೆ ಅನುಕೂಲಿಸುವ ಟೆಲಿವಿಷನ್ ಯಂತ್ರಗಳು–ಇವುಗಳೆಲ್ಲ ಬೇಕಾಗಿವೆ. ವರ್ತಮಾನವನ್ನು ಅದಷ್ಟು ಬೇಗ ತಿಳಿಸುವ ವಾರಪತ್ರಿಕೆಗಳೂ, ದೈನಂದಿನಪತ್ರಿಕೆಗಳೂ, ನಮ್ಮ ನಮ್ಮ ವೇಗಕ್ಕೆ ಸಾಲದು. ಬೆಳಗಿನ ಪತ್ರಿಕೆಯು ಸಾಯಂಕಾಲಕ್ಕೆ ಹಳೆಯದಾಯಿತು; ಹೊಸದಾದ ಸಾಯಂಕಾಲದ ಪತ್ರಿಕೆಯೇ ನಮಗೆ ಬೇಕು! ಇನ್ನುಮೇಲೆ ದಿನಕ್ಕೆ ಎರಡೆರಡು ಘಂಟೆಗಳಿಗೊಂದರಂತೆ ಕೂಡ ಪತ್ರಿಕೆಗಳು ಹೊರಡಬೇಕಾಗಬಹುದು.

ಇದನ್ನೆಲ್ಲ ಕಾಮವಿಲಾಸವೆನ್ನಬಹುದು. ಕಾಮವಿಲಾಸವು ವ್ಯಕ್ತಿಗಳಂತೆ ಜನಾಂಗಗಳಲ್ಲಿಯೂ ತೋರಹತ್ತಿದೆ. ಫ್ರೆಂಚರನ್ನು ಇಂಗ್ಲಿಷರು ಈ ಕಾಮದ ಬೇಟೆಯ ವೇಗದಲ್ಲಿ ಸೋಲಿಸಿದರೆ, ಅವರನ್ನು ಜರ್ಮನಿಯವರೂ ಅವರನ್ನು ಅಮೆರಿಕದವರೂ ಸೋಲಿಸುವರು. ಸದ್ಯಕ್ಕೆ ಅಮೆರಿಕ, ರಷ್ಯ, ಈ ರಾಷ್ಟ್ರಗಳಲ್ಲಿ ಯಾರು ಈ ವೇಗದಲ್ಲಿ ಮುಂದಾಗುವರೋ ಯಾರು ಹಿಂದೆ ಬೀಳುವರೋ ತಿಳಿಯದಾಗಿದೆ.

ಕಾಮವು ಪೂರ್ತಿಯಾಗದಿದ್ದರೆ, ಅದಕ್ಕೆ ಏನಾದರೂ ತಡೆಯುಂಟಾದರೆ, ಅದು ಕ್ರೋಧವಾಗಿ ಪರಿಣಮಿಸುತ್ತದೆ. ಇದು ಈ ನಮ್ಮ ನಾಗರಿಕತೆಯ ಎರಡನೆಯ ಲಕ್ಷಣವು. ಕಾಮಕ್ಕೂ ಕ್ರೋಧಕ್ಕೂ ಒಂದು ತಾರತಮ್ಯವುಂಟು. ಮೊದಲು ವಸ್ತುವಿನ ವಿಷಯದ ಸಂಕಲ್ಪವಾಗಿ ಕಾಮದ ರೂಪವನ್ನು ತಳೆದ ಬಳಿಕ, ವಸ್ತುವಿನ ಪ್ರಾಪ್ತಿಗಾಗಿ ಪೈಪೋಟಿಯಿಂದ ವೇಗವನ್ನು ಪಡೆದು ಬಹಳ ಒದ್ದಾಟದಿಂದ ಪ್ರಯತ್ನಿಸಿದಮೇಲೆ ಆದರ ಫಲವು ಕಾಣಿಸಿಕೊಳ್ಳಬೇಕು.

ಆದರೆ ಕಾಮಕ್ಕೆ ತಡೆ ಉಂಟಾದಾಗ ಕ್ರೋಧವುಂಟಾಗುವದು ನಮಗೆ ತಿಳಿಯುವದೇ ಇಲ್ಲ. ಅದು ಬಂದಾಗ, ಬಂದಿದೆ ಎಂಬ ಅರಿವುಕೂಡ ಇಲ್ಲದೆ ತನ್ನ ಕಾರ್ಯವನ್ನು ಮಾಡಿಬಿಡುತ್ತದೆ. ಆಮೇಲೆ ಆ ಸಿಟ್ಟು ಇಳಿದಾಗ, 'ಎಲಾ ನಾನೇಕೆ ಹೀಗೆ ಮಾಡಿದೆ?' ಎಂದು ಪಶ್ಚಾತ್ತಾಪವನ್ನು ತೋರಿಸು ವಂತೆ ಮಾಡುತ್ತದೆ. ಕ್ರೋಧದ ಫಲವು ಅದು ಹೋದಮೇಲೂ ಬಹಳ ಕಾಲದವರೆಗೆ ಇದ್ದುಕೊಂಡು ನಮ್ಮನ್ನು ವ್ಯಥೆಪಡಿಸಬಹುದು. ಕ್ರೋಧವಶ ರಾಗಿ ಮಾಡಿದ ಅನರ್ಥಗಳನ್ನು ಸುಧಾರಿಸಿಕೊಳ್ಳುವದು ವ್ಯಕ್ತಿಗಳಿಗಿಂತಲೂ ಜನಾಂಗಗಳಿಗೆ ಹೆಚ್ಚು ಕಷ್ಟವಾಗಿರುವದು. ಹಿಂದೆ ಆಗಿಹೋಗಿರುವ ಭೂಮಂ ಡಲಯುದ್ಧದ ಪರಿಣಾಮವು ಇನ್ನೂ ನಮ್ಮನ್ನು ಗೋಳುಗುಟ್ಟಿಸುತ್ತಲೇ ಇದೆ. ಈ ಯುದ್ಧದಲ್ಲಿ ಭಾಗವನ್ನು ವಹಿಸಿದವರೂ ಭಾಗವನ್ನು ವಹಿಸದೆ ಇದ್ದವರೂ, ಅವರಲ್ಲಿ ಗೆದ್ದವರು, ಸೋತವರು, ಆ ಕಾಲಕ್ಕೆ ಪರವಶರಾಗಿ ಅದರ ಹಾವಳಿಗೆ ಸಿಕ್ಕಿಕೊಂಡವರು—ಎಲ್ಲರೂ ಅದರ ದುಷ್ಟಪರಿಣಾಮವನ್ನು ಇನ್ನೂ ಅನುಭವಿಸುತ್ತಿರಬೇಕಾಗಿದೆ. ಆಟಂಬಾಂಬನ್ನು ಹಾಕಿ ಜಪಾನಿನಲ್ಲಿ ಅನಾಹುತವನ್ನು ಮಾಡಿದವರಿಗೂ ಕಲ್ಪನೆಯಲ್ಲಿಲ್ಲದೆ ಇದ್ದ ಅನರ್ಥಗಳು ಆ ಪ್ರದೇಶದಲ್ಲಿ ಈಗಲೂ ತಮ್ಮ ಕಾರ್ಯವನ್ನು ತೋರಿಸುತ್ತಿವೆ.

ಭೀತಿಯೆಂಬುದು ನಾಗರಿಕತಾರೋಗದ ಮತ್ತೊಂದು ಲಕ್ಷಣವು. ಈಗ ಎಲ್ಲೆಲ್ಲಿಯೂ ಈ ಲಕ್ಷಣವು ಉಲ್ಬಣವಾಗಿ ತೋರುತ್ತಿದೆ. ನನ್ನ ಭೀತಿ ಮತ್ತೊಬ್ಬನಿಗೆ, ಮತ್ತೊಬ್ಬನ ಭೀತಿ ನನಗೆ. ಯಾರು ಇಲ್ಲಿ ನನಗೆ ಮೋಸ ಮಾಡುವರೋ, ಯಾರು ಇಲ್ಲಿ ನನಗೆ ತೊಂದರೆಯನ್ನು ಮಾಡುವರೋ, ಯಾರು ನನ್ನ ಯೋಗಕ್ಷೇಮಕ್ಕೆ ಅಡ್ಡಿಯನ್ನು ತರುವರೋ, ಯಾರಿಂದ, ಯಾವಾಗ ನನಗೆ ಅಪಾಯವುಂಟಾದೀತೊ—ಎಂಬ ಭೀತಿಯು ನಮ್ಮೆಲ್ಲರನ್ನೂ ಆವರಿಸಿಕೊಂಡುಬಿಟ್ಟಿದೆ. 'ನಾನು ಮತ್ತೊಬ್ಬರಿಗೆ ಅಂಜುವವನಲ್ಲ' ಎಂದು ನಮ್ಮಲ್ಲಿ ಕೆಲವರು ಜಂಬಕೊಚ್ಚಿಕೊಳ್ಳುತ್ತಿರಬಹುದು. ಆದರೆ ಯಕ್ಷಗಾನದ ಆಟವೊಂದರಲ್ಲಿ ಶತ್ರುಗಳ ಬಾಣದ ಪೆಟ್ಟನ್ನು ತಡೆಯಲಾರದೆ ಓಡಿಬಂದು ಸುದ್ದಿಯನ್ನು ಹೇಳುತ್ತಿದ್ದ ಹನುಮನಾಯಕನು ಗಡಗಡನೆ ನಡುಗುತ್ತಲೇ 'ನಾನೇನೂ ಹೆದರಿಲ್ಲ' ಎಂದು ಹೇಳಿಕೊಳ್ಳುತ್ತಿದ್ದಂತೆಯೇ ಆಗಿದೆ, ನಮ್ಮ ಬಾಳು! ನಾವು ಅಂಜಿಕೊಂಡಿಲ್ಲವೆಂದು ಹೊರಗೆ ತೋರಿಸಿಕೊಳ್ಳುವದಕ್ಕೆ

ಪ್ರಯತ್ನಿಸುತ್ತಿದ್ದರೂ ಒಳಗೆ ನಮಗೆಲ್ಲ ಗೊತ್ತಿರುವಂತೆ ಭಯವು ನಮ್ಮನ್ನು ಆವರಿಸಿಕೊಂಡುಬಿಟ್ಟಿರುತ್ತದೆ.

ಈ ಅಂಜಿಕೆಯಿಂದ ನಾವು ನಾಳೆಗೆ ಏನಾದೀತೋ ಎಂದು ಶಂಕಿಸಿ ಒಬ್ಬರನ್ನೊಬ್ಬರು ಮೋಸಗೊಳಿಸುತ್ತಿರುವೆವು. ಹಳೆಯ ಪುಸ್ತಕವೊಂದರಲ್ಲಿರುವ 'ಸಗಣಿ ತಕ್ಕಡಿಗ' 'ಮರಳು ತಕ್ಕಡಿಗ'–ಎಂಬ ಇಬ್ಬರು ವಂಚಕರ ಕಥೆಯನ್ನು ನಿಮ್ಮಲ್ಲಿ ಕೆಲವರಾದರೂ ಓದಿರಬಹುದು. ಅವರೊಳಗೆ ಒಬ್ಬನಲ್ಲಿ ಒಂದು ಬಟ್ಟೆಯ ಗಂಟಿನಲ್ಲಿ ಬರಿಯ ಸಗಣಿ ಇತ್ತು. ಮತ್ತೊಬ್ಬನ ಗಂಟಿನಲ್ಲಿ ಬರಿಯ ಮರಳಿತ್ತು. ಅವರಿಬ್ಬರೂ ಒಂದು ಪರಸ್ಥಲದ ಛತ್ರದಲ್ಲಿ ಸೇರಿದಾಗ 'ನನ್ನಲ್ಲಿ ಅನ್ನವಿದೆ ; ಯಾರಾದರೂ ಅಕ್ಕಿಯನ್ನು ಕೊಟ್ಟರೆ ಇದನ್ನು ಕೊಟ್ಟೇನು'– ಎಂದು ಸಗಣಿ ತಕ್ಕಡಿಗನೂ 'ನನ್ನಲ್ಲಿ ಅಕ್ಕಿ ಇದೆ ; ಯಾರಾದರೂ ಅನ್ನವನ್ನು ಕೊಟ್ಟರೆ ಇವನ್ನು ಕೊಟ್ಟೇನು' ಎಂದು ಮರಳುತಕ್ಕಡಿಗನೂ ಹೇಳಿಕೊಂಡರು. ಅವರಿಬ್ಬರೂ ತಮ್ಮ ಗಂಟುಗಳನ್ನು ವಿನಿಮಯಮಾಡಿಕೊಂಡು ದೂರಕ್ಕೆ ಹೋಗಿ ಬಿಚ್ಚಿನೋಡಲು ಇಬ್ಬರಿಗೂ ತಮಗಾಗಿರುವ ಮೋಸವು ಗೊತ್ತಾಗಿ ಆಶ್ಚರ್ಯವಾಯಿತು ! ಹೀಗೆಯೇ ನಾವು ಹೇಗಾದರೂ ಮಾಡಿ ನಮ್ಮಲ್ಲಿರುವ ಅಯೋಗ್ಯಪದಾರ್ಥಗಳನ್ನು ಮತ್ತೊಬ್ಬರಿಗೆ ಕೊಟ್ಟು ಅವರಿಂದ ಉತ್ತಮವಾದ ಪದಾರ್ಥಗಳನ್ನು ಪಡೆಯಬೇಕೆಂದು ಪ್ರಯತ್ನಿಸುತ್ತಿರುವೆವು. ಆದರೆ ಅವರೂ ಅದೇ ವಂಚನಾಬುದ್ಧಿಯನ್ನು ಅವಲಂಬಿಸಿರುವದರಿಂದ ಇಬ್ಬರಿಗೂ ಮೋಸವೇ ಆಗಿ ನಮ್ಮ ದಡ್ಡತನಕ್ಕೆ ನಾವೇ ನಾಚಿಕೊಳ್ಳುವಂತಾಗಿದೆ ! ಹೀಗೆ ಯೋಗಕ್ಷೇಮಗಳ ಭೀತಿಯೂ ಅದರ ಫಲವಾಗಿ ಪರಸ್ಪರವಾಗಿ ಮಾಡುತ್ತಿರುವ ವಂಚನೆಯೂ ಅದರಿಂದಾಗುವ ಸಂಕಟವೂ ನಮ್ಮ ನಾಗರಿಕತೆಯೆಂಬ ರೋಗದ ಹೆಗ್ಗುರುತುಗಳಾಗಿರುತ್ತವೆ.

ಈ ಪರಸ್ಪರ ಭೀತಿಯೂ ವಂಚನೆಯೂ ಎಲ್ಲಿಯೋ ಕೆಲವು ವ್ಯಕ್ತಿಗಳಿಗೆ ಮಾತ್ರವೇ ಸೇರಿರುವದಿಲ್ಲ. ಇದು ಎಲ್ಲರನ್ನೂ ಅಂಟಿಕೊಂಡಿರುವ ಒಂದಾನೊಂದು ಸಾಂಕ್ರಾಮಿಕವಾದ ಉಪರೋಗವಾಗಿದೆ–ಎಂದರೂ ಸಲ್ಲುತ್ತದೆ. ಈಗ ಯಾರ ಬಾಯಲ್ಲಿ ನೋಡಿದರೂ ಮೂರನೆಯ ಭೂಮಂಡಲಯುದ್ಧದ ಮಾತೇ ಬರುತ್ತಲಿದೆ. ಈ ಭೀತಿಯು ದೊಡ್ಡದೊಡ್ಡ ಜನಾಂಗಗಳಿಗೂ

ಉಂಟಾಗಿರುವದರಿಂದ ಹೊರಗೆ ಅವರು ಯುದ್ಧದ ಅಂಜಿಕೆಯೇನೂ ಇಲ್ಲ ವೆಂದು ಹೇಳುತ್ತಿದ್ದರೂ ಅದಕ್ಕೆ ಬೇಕಾದ ರಕ್ಷಣೋಪಾಯವನ್ನು ಕೈಗೊಳ್ಳು ತ್ತಲೇ ಇರುತ್ತಾರೆ. ಎಲ್ಲಾ ರಾಷ್ಟ್ರಗಳೂ ಈಗ ಸೈನ್ಯವನ್ನು ಹೆಚ್ಚಿಸುತ್ತಿವೆ ; ಎಲ್ಲಾ ರಾಷ್ಟ್ರಗಳೂ ಸ್ವಯಂಸೇವಕರನ್ನು ಕೂಡಿಹಾಕಿಕೊಳ್ಳುತ್ತಲಿವೆ ; ಅಲ್ಲಲ್ಲಿಯೇ ರಾಷ್ಟ್ರಗಳಿಗೆ ಪರಸ್ಪರವಾಗಿ ಸೈನಿಕವಾದ ಒಪ್ಪಂದಗಳು ಆಗುತ್ತಿವೆ. ಅಲ್ಲಲ್ಲಿ ಶಸ್ತ್ರಾಸ್ತ್ರಗಳ ಮತ್ತು ಸಿಪಾಯಿಗಳ ಶಿಬಿರಗಳು ಏರ್ಪಡುತ್ತಿವೆ. ಇಡಿಯ ಭೂಮಂಡಲವನ್ನೇ ಮೃತ್ಯುವು ಆವರಿಸಿಕೊಂಡಿದೆ ಎಂಬ ಭೀತಿಯು ಎಲ್ಲರನ್ನೂ ಹಿಡಿದುಕೊಂಡುಬಿಟ್ಟಿದೆ ಎಂಬುದು ಖಂಡಿತ !

## ನಮ್ಮ ವ್ಯವಹಾರದ ಸ್ವರೂಪ

ಈಗಿನ ನಮ್ಮ ವ್ಯವಹಾರವು ಹೇಗಿದೆ ? ರೋಗಿಗಳು ಬಡಬಡಿಸುವಂತೆ ನಾವು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿರುವೆವು, ಪರನಿಂದೆಯಲ್ಲಿ ನಿರತರಾಗಿರುವೆವು. ಧನಾಶೆಯು ನಮ್ಮೆಲ್ಲರನ್ನೂ ಪಿಶಾಚಿಯಂತೆ ಹಿಡಿದು ಕೊಂಡಿರುವದು ಮತ್ತೊಬ್ಬರಿಗೆ ಗೊತ್ತಾಗಲೆಂದು ಜನರಿಂದ ನಮ್ಮ ಹೊಗಳಿಕೆ ಯನ್ನು ಮಾಡಿಸಿಕೊಳ್ಳುತ್ತಿರುವೆವು, ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿಕೊಳ್ಳು ತ್ತಿರುವೆವು ; ಆದರೂ ನಮಗೆ ಶ್ಲಾಘನೆಯು ಬೇಕಿಲ್ಲವೋ ಎಂಬಂತೆ ನಟಿಸು ತ್ತಿರುವೆವು ! ಮತ್ತೊಬ್ಬರ ಯೋಗ್ಯತೆಯನ್ನು ವಿಮರ್ಶಿಸುವ ನೆಪದಿಂದ ಅವರ ಹುಳುಕುಗಳನ್ನು ಹೊರಕ್ಕೆ ಹಾಕುತ್ತಿರುವೆವು ; ಆದಗೂ ಮತ್ತೊಬ್ಬರನ್ನು ನಿಂದಿಸುವದು ಯುಕ್ತವಲ್ಲವೆಂಬ ಅಭಿಪ್ರಾಯವನ್ನು ಆಗಾಗ್ಗೆ ಹೊರಪಡಿಸುತ್ತ ಲೂ ಇರುವೆವು. ಬಗೆಬಗೆಯ ಪ್ರಕಾರಗಳಿಂದ ಧನವನ್ನು ಗಳಿಸುವ ಉಪಾಯ ಗಳನ್ನು ಕೈಗೊಳ್ಳುತ್ತಿರುವೆವು ; ಅದಕ್ಕೆ ಲೋಕೋಪಕಾರವೇ ನಿಮಿತ್ತವೆಂಬ ಪೊಳ್ಳುನೆಪವನ್ನು ಮುಂದಕ್ಕೆ ಚಾಚುತ್ತಿರುವೆವು. ಈಗ ನಾವೆಲ್ಲರೂ ರಾಜ ನೀತಿಯಲ್ಲಿ ಶುಕ್ರಾಚಾರ್ಯರನ್ನೂ ಚಾಣಕ್ಯನನ್ನೂ ಮೀರಿಸಿದವರಂತೆ ಸರ್ವದಾ ರಾಜಕೀಯವಿಚಾರವನ್ನೇ ಮಾಡುತ್ತಿರುವೆವು, ಅಮೆರಿಕ, ರಷ್ಯ, ಕೊರಿಯ, ಪಾಕಿಸ್ಥಾನ, ಭಾರತ–ಎಂದು ರಾಷ್ಟ್ರಗಳ ಮಾತನ್ನಾಡುತ್ತಿರು ವದೂ, ಆ ದೇಶಗಳ ಸರಕಾರದ ನೀತಿಯನ್ನು ವಿಮರ್ಶಿಸುವದೂ, ಜನ ನಾಯಕರಲ್ಲಿ 'ಇಂಥವನು ಹೀಗೆ ಮಾಡಬಾರದಿತ್ತು; ಅಂಥವನು ಹಾಗೆ ಮಾಡಬೇಕಾಗಿತ್ತು'–ಎಂದು ನಮ್ಮ ವಿದ್ವತ್ತಾಪೂರ್ಣವಾದ ಅಭಿಪ್ರಾಯ

ಗಳನ್ನು ಪ್ರಕಟಿಸುವದೂ ನಮ್ಮ ನಿತ್ಯಾಹ್ನಿಕವಾಗಿಬಿಟ್ಟಿದೆ. ಪ್ರಪಂಚದ ರಾಷ್ಟ್ರಗಳ ಆಡಳಿತಗಳ ಹೊಣೆಗಾರಿಕೆಯು ನಮ್ಮ ತಲೆಯಮೇಲೆ ಬಿದ್ದಿದೆಯೋ ಎಂಬಂತೆ ರಾಜಕೀಯಚರ್ಚೆಗಳಲ್ಲಿ ಬಹಳ ಶ್ರದ್ಧೆಯನ್ನು ವಹಿಸುತ್ತಿರುವೆವು. ಯಾವ ಕಾರ್ಯನಿರ್ವಾಹಕಸಭೆಯಲ್ಲಾಗಲಿ 'ನಮ್ಮ ಓಟನ್ನು ನಮ್ಮವರಿಗೇ ಕೊಡಬೇಕು' ಎಂಬ ಕೂಗು ಕೇಳಬರುತ್ತಿದೆ ! ಬಗೆಬಗೆಯ ಸಂಘಗಳನ್ನು ಏರ್ಪಡಿಸಿಕೊಂಡು ವ್ಯಕ್ತಿಗಳು ಒಬ್ಬರನ್ನೊಬ್ಬರು ರಾಗದ್ವೇಷಗಳಿಂದ ನೋಡುತ್ತಿರುವಂತೆಯೇ ಈ ಸಂಘಗಳ ಪರವಾಗಿಯೂ ಕಾದಾಡುವದಕ್ಕೆ ನಾವು ಸಿದ್ಧರಾಗಿರುತ್ತೇವೆ. ಈಗಿನ ನಮ್ಮ ರಾಷ್ಟ್ರಗಳೇನೂ ಈ ವಿಷಯದಲ್ಲಿ ಹಿಂದೆಬಿದ್ದಿರುವದಿಲ್ಲ. ಒಂದೊಂದು ಪ್ರಬಲವಾದ ಸರಕಾರವೂ ತನ್ನತನ್ನ ಒಂದೊಂದು 'ಬುಲಿಟಿನ್' (Bulletin) ಎಂಬ ಆತ್ಮಪ್ರಶಂಸೆಯ ಪತ್ರಿಕೆಯನ್ನು ಹೊರಡಿಸುತ್ತಿವೆ. ಪತ್ರಿಕಾಸಂಪಾದಕರಿಗೆ ಧನಾದಿಗಳಿಂದ ಪ್ರಲೋಭನಮಾಡಿ ತನ್ನ ಪದ್ಧತಿಯನ್ನೂ ನೀತಿಯನ್ನೂ ಹೊಗಳುವದಕ್ಕೂ ತನಗೆ ಪ್ರತಿಕೂಲವಾಗಿರುವ ರಾಷ್ಟ್ರಗಳ ಸರಕಾರವನ್ನು ತೆಗಳುವದಕ್ಕೂ ಪ್ರೋತ್ಸಾಹವನ್ನು ಕೊಡುತ್ತಿವೆ. ದೇಶದೇಶಗಳಲ್ಲಿಯೂ ತನ್ನ ರಾಯಭಾರಿಗಳನ್ನಿಟ್ಟು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿವೆ ; ಆಗಾಗ್ಗೆ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಕುಟಿಲೋಪಾಯಗಳನ್ನು ಕೈಗೊಳ್ಳುತ್ತಲೂ ಇವೆ. "ಅವಿದ್ಯಾಯಾಮನ್ತರೇ ವರ್ತಮಾನಾಃ ಸ್ವಯಂ ಧೀರಾಃ ಪಣ್ಡಿತಂ ಮನ್ಯಮಾನಾಃ । ಜಙ್ಘನ್ಯಮಾನಾಃ ಪರಿಯನ್ತಿ ಮೂಢಾ ಅನ್ಧೇನೈವ ನೀಯಮಾನಾ ಯಥಾನ್ಧಾಃ ॥" (ಅಜ್ಞಾನದ ಕಗ್ಗತ್ತಲೆಯೊಳಗೆ ಇದ್ದುಕೊಂಡು, ತಾವೇ ತಿಳಿದವರು, ಪಂಡಿತರು ಎಂದುಕೊಳ್ಳುತ್ತಾ ಬಗೆಬಗೆಯ ಅನರ್ಥಗಳ ಹೊಡೆತಕ್ಕೆ ಸಿಕ್ಕಿಬಿದ್ದು ಮೂಢರಾದವರು—ಕುರುಡರು ತೋರಿಸಿದ ದಾರಿಯಲ್ಲಿ ನಡೆಯುವ ಕುರುಡರು ಕಲ್ಲುಮುಳ್ಳುಗಳಮೇಲೆ ಬಿದ್ದು ಸಂಕಟಪಡುವಂತೆ— ಸುಮ್ಮನೆ ಅತ್ತಿತ್ತ ನೋಡುತ್ತಿರುವರು) ಎಂಬ ಶ್ರುತಿಯು ಅನೇಕಪ್ರಕಾರಗಳಿಂದ ನಮ್ಮ ವಿಷಯದಲ್ಲಿ ಸಾರ್ಥಕವಾಗಿರುತ್ತದೆ. ಮನೆಗೆ ಮಾರಿ, ಹೆರರಿಗೆ ಉಪಕಾರಿ— ಎಂಬಂತೆ ನಮ್ಮನಮ್ಮ ವೈಯಕ್ತಿಕವಿಚಾರಕ್ಕೆ ನಮಗೆ ಬಿಡುವೇ ಇಲ್ಲವಾಗಿಬಿಟ್ಟಿದೆ. ನಮ್ಮ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ— ಇವುಗಳು ಸಂಪೂರ್ಣವಾಗಿ ನಮ್ಮನ್ನು ವಶಗೊಳಿಸಿಕೊಂಡುಬಿಟ್ಟಿವೆ.

ಅವು ನಮ್ಮವು ಎಂದು ನಾವು ಕೊಚ್ಚಿಕೊಳ್ಳುತ್ತಿರುವೆವು ; ಆದರೆ ನಿಜವಾಗಿ ಅವನ್ನು ನಮ್ಮ ವಶಕ್ಕೆ ಹೇಗೆ ತೆಗೆದುಕೊಳ್ಳಬಹುದು ಎಂಬ ವಿಚಾರವು ಮಾತ್ರ ನಮಗೆ ಬೇಡವಾಗಿರುತ್ತದೆ. ಐದು ಅಕ್ಷರಗಳನ್ನು ಕಲಿತವನು ಶಿವನಿಗೆ ಪಂಚಾಕ್ಷರಿಯ ಉಪದೇಶವನ್ನು ಮಾಡುವದಕ್ಕೆ ಹೊರಡುವಂತೆ ಪರೋಪದೇಶಕ್ಕೇ ನಮ್ಮ ಕಾಲವನ್ನೆಲ್ಲ ವಿನಿಯೋಗಿಸುತ್ತಿರುತ್ತೇವೆ.

## ಎಂಥ ಸಂಪತ್ತೂ ಸ್ಥಿರವಲ್ಲ

ನಿಜವಾಗಿ ನಮ್ಮ ಸ್ಥಿತಿ ಹೇಗಿದೆ ? ನಾವು ಕಾಮಕ್ರೋಧಲೋಭಗಳಿಗೆ ಸಂಪೂರ್ಣವಾಗಿ ವಶರಾಗಿಬಿಟ್ಟಿರುತ್ತೇವೆ. ನಮಗೆ ಎಷ್ಟು ಸಂಪಾದನೆಮಾಡಿದರೂ ತೀರದು, ಎಷ್ಟು ಭೋಗಗಳನ್ನು ಅನುಭವಿಸಿದರೂ ತೃಪ್ತಿಯಿಲ್ಲ, ಅದಕ್ಕಾಗಿ ಮತ್ತೊಬ್ಬರಿಗೆ ಎಷ್ಟು ಹಿಂಸೆಯನ್ನುಂಟುಮಾಡಿದರೂ ಸಾಲದು ! ಹಿಂದಕ್ಕೆ ಒಮ್ಮೆ ದೇವೇಂದ್ರನು ರಾಕ್ಷಸರ ಉಪಟಳವನ್ನು ತಪ್ಪಿಸಿಕೊಳ್ಳುವದಕ್ಕೂ 'ಭೋಗದಲ್ಲಿ ಇಂದ್ರ' ಎಂಬ ಗಾದೆಯು ಶಾಶ್ವತವಾಗಿ ನಿಲ್ಲುವಂತೆ ತನ್ನ ವೈಭವವನ್ನು ಜ್ಞಾಪಿಸಿಕೊಳ್ಳುವದಕ್ಕೂ ತನ್ನ ಅಮರಾವತಿಯ ಸುತ್ತಲೂ ಒಂದು ಚಿನ್ನದ ಕೋಟೆಯನ್ನು ಕಟ್ಟಿಸುವದಕ್ಕೆ ಪ್ರಾರಂಭಿಸಿದನಂತೆ. ಆ ಕೋಟೆಗೆ ತಕ್ಕಷ್ಟು ಚಿನ್ನವನ್ನು ಒದಗಿಸುವದಕ್ಕೂ ಮತ್ತು ಬೇಗನೆ ಆ ಕೋಟೆಯು ನಿರ್ಮಾಣವಾಗುವದಕ್ಕೂ ಏರ್ಪಡಿಸಬೇಕೆಂಬ ತವಕದಿಂದ ತನ್ನ ರಾಜ್ಯಭಾರದ ವಿಚಾರವನ್ನೆಲ್ಲ ಮರೆತು ಆ ಕೋಟೆಯ ಕೆಲಸವಾಗುತ್ತಿದ್ದ ಸ್ಥಲದ ಹತ್ತಿರದಲ್ಲಿಯೇ ಇರುವದಕ್ಕೆ ಪ್ರಾರಂಭಿಸಿದನಂತೆ ! ಹೀಗಾಗಿ ದೇವಲೋಕದ ವಿಚಾರಗಳನ್ನು ಮಾಡುವವರೇ ಇಲ್ಲದಂತಾದರೂ ಯಾರಿಗೂ ಇಂದ್ರನಿಗೆ ಎಚ್ಚರಿಕೆಕೊಡುವ ಧೈರ್ಯವಿಲ್ಲದಂತೆ ಆಯಿತು. ಹೀಗಿರುವಲ್ಲಿ ಒಂದು ದಿನ ಆತನ ಬಳಿಗೆ ಲೋಮಶಮಹರ್ಷಿಗಳು ದಯಮಾಡಿಸಿದರು. ಆ ಋಷಿವರ್ಯರ ಮೈಮೇಲೆಲ್ಲ ದಟ್ಟವಾಗಿ ಕೂದಲು ಬೆಳೆದಿದ್ದದ್ದರಿಂದ ಆ ಹೆಸರು ಅವರಿಗೆ ಅನ್ವರ್ಥವಾಗಿತ್ತು. ಇಂದ್ರನಿಗೆ ಋಷಿಗಳನ್ನು ಸತ್ಕಾರ ಮಾಡುವಷ್ಟು ಕಾಲದ ಅವಕಾಶವೂ ಇಲ್ಲದಿದ್ದರೂ ಅವರ ಎದೆಯಮೇಲೆ ಕೂದಲಿಲ್ಲದ ಒಂದು ಸ್ವಲ್ಪಭಾಗವು ಕಣ್ಣಿಗೆ ಬಿದ್ದು ಅವನ ಕುತೂಹಲವನ್ನು ಕೆರಳಿಸಿದ್ದರಿಂದ, ಅಷ್ಟುಭಾಗದಲ್ಲಿ ಮಾತ್ರ ಅವರ ಮೈಮೇಲೆ ಕೂದಲಿಲ್ಲ

ವೇಕೆಂದು ಪ್ರಶ್ನಿಸಿದನು. ಆಗ ಲೋಮಶರು 'ಅಯ್ಯ, ಇದೊಂದು ಕಾಲ ಗಣನೆಯ ಪ್ರಕಾರವು. ಅಮರಾವತಿಯ ಒಡೆಯರಾದ ಇಂದ್ರರುಗಳು ಅನೇಕರು ಆಗಿಹೋಗಿದ್ದಾರಷ್ಟೆ. ಒಬ್ಬೊಬ್ಬ ಇಂದ್ರನು ಹೋದಾಗ ಈ ಭಾಗದಲ್ಲಿ ಒಂದೊಂದು ಕೂದಲು ಬಿದ್ದುಹೋಗುತ್ತದೆ. ಇಗೊ, ಈ ಅಲು ಗಾಡುತ್ತಿರುವ ಕೂದಲು ನಿನ್ನ ಸರದಿಯದು' ಎಂದರು. ಈಗ ಇಂದ್ರನಿಗೆ ಕಣ್ಣು ತೆರೆದಂತಾಯಿತು. 'ಆಹಾ ! ಎಂಥ ಮೂಢನು, ನಾನು ! ಈ ಅಲ್ಪಾಯುಸ್ಸಿನ ಜೀವಿತಕ್ಕೆಂದು ಚಿನ್ನದ ಕೋಟೆಯನ್ನು ಕಟ್ಟಿಸುವುದಕ್ಕೆ ಹೊರಟು ನನ್ನ ಕಾರ್ಯವನ್ನೆಲ್ಲ ಮರೆತು ನಿಃಶ್ರೇಯಸವನ್ನೇ ಕಳೆದುಕೊಳ್ಳು ವದಕ್ಕೆ ಹೊರಟಿರುವೆನಲ್ಲ ! ನನಗೆ ಇನ್ನು ಮುಂದೆ ಏನು ಗತಿಯಾದೀತೊ !' ಎಂದುಕೊಂಡು ದಿಗಿಲಿನಿಂದ ಕೂಡಲೆ ಆ ಋಷಿಗಳನ್ನು ನಮಸ್ಕರಿಸಿ ಅವರ ಆಶೀರ್ವಾದವನ್ನು ಬೇಡಿ ಮುಂದಕ್ಕೆ ತನ್ನ ಕಾರ್ಯದಲ್ಲಿ ನಿರತನಾದನಂತೆ !

## ಕಾಮಕ್ರೋಧಲೋಭಗಳೂ ಅವುಗಳಿಗೆ ಪ್ರತೀಕಾರವೂ

ಕಾಮಕ್ರೋಧಲೋಭಗಳಿಗೆ ವಶರಾಗಿರುವ ನಾವುಗಳು ಈ ಉಪದೇಶ ದಿಂದ ಎಚ್ಚರಗೊಳ್ಳಬೇಕು. ಗೀತೆಯಲ್ಲಿ ಭಗವಂತನು ಹೀಗೆಂದು ಹೇಳಿರು ತ್ತಾನೆ— "ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ। ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥" ಕಾಮವು, ಎಂದರೆ ವಸ್ತುಗಳ ಬಯಕೆ ; ಕ್ರೋಧವು ಎಂದರೆ ಕಾಮಕ್ಕೆ ತಡೆಯಾದಾಗ ಬಂದೊದಗುವ ಸಿಟ್ಟು ; ಲೋಭವು ಎಂದರೆ ಎಲ್ಲವೂ ನನಗೇ ಆಗಬೇಕು ಎಂಬ ಬಿಡಿಯುದಾಸೆ. ಈ ಮೂರೂ ನರಕಕ್ಕೆ ಹೆಬ್ಬಾಗಿಲುಗಳು. ಅವುಗಳು ಯಾವಾಗಲೂ ತೆರೆದಿರುವವು ; 'ಎಲ್ಲರಿಗೂ ಆಹ್ವಾನವುಂಟು' ಎಂದು ಬರೆ ದಿರುವ ಸ್ವಾಗತದ್ವಾರಗಳಂತೆ ಅವುಗಳ ಮೂಲಕ ಯಾರುಬೇಕಾದರೂ ಹೋಗಿ ನರಕಯಾತನೆಯನ್ನು ಅನುಭವಿಸಬಹುದು. ಇದನ್ನರಿತೂ ಅರಿತೂ ನಾವು, ನಾನುತಾನೆಂದು ಮುನ್ನುಗ್ಗುತ್ತಿದ್ದೇವಲ್ಲ! ನಾವು ಎಷ್ಟು ಕಷ್ಟಪಟ್ಟರೆ ತಾನೆ ದೇವೇಂದ್ರನ ಸಂಪತ್ತಾಗಲಿ, ಆಯುಸ್ಸಾಗಲಿ, ಭೋಗವಾಗಲಿ, ನಮಗೆ ದೊರೆಯುವ ಸಂಭವವಿದೆಯೇನು ? ಆದರೆ ಕಾಮಕ್ರೋಧಲೋಭ ಗಳಿಂದಾಗುವ ಅನರ್ಥವು ಮಾತ್ರ ಕಟ್ಟಿಟ್ಟ ಬುತ್ತಿ. ಅದನ್ನು ನಾವು ಅನು

ಭವಿಸಬೇಕಾಗಿದೆ. ಅಪಥ್ಯವನ್ನೇ ಸೇವಿಸುವ ರೋಗಿಗಳಂತೆ ನವನಾಗರಿಕತೆಯಲ್ಲಿರುವ ನಾವು ಈ ಅಯೋಗ್ಯಮನೋವೃತ್ತಿಗಳಿಗೇ ಒಲಿಯುತ್ತಿರುವದೂ ಇವುಗಳಿಂದಾಗಬಹುದಾದ ಅಪಾಯವನ್ನು ಲೆಕ್ಕಿಸದೆ ಇರುವದೂ ಆಶ್ಚರ್ಯವಲ್ಲವೆ ?

'ಈ ಮೂರನ್ನು ಬಿಡಬೇಕು' ಎಂದು ಗೀತೆಯಲ್ಲಿ ಹೇಳಿರುವದರ ಪೂರ್ಣಾಭಿಪ್ರಾಯವನ್ನು ನಾವು ಮನಸದಂದುಕೊಳ್ಳಬೇಕು. ಇವುಗಳನ್ನು ಬಿಡಬೇಕೆಂದು ಹಂಬಲಿಸಿದಮಾತ್ರಕ್ಕೆ ಇವು ನಮ್ಮನ್ನು ಬಿಟ್ಟು ಹೋಗಲಾರವು. ಪ್ರಯತ್ನಮಾಡಿದಷ್ಟೂ ಅವು ಮತ್ತೆಮತ್ತೆ ನಮ್ಮನ್ನು ಬಗಿಯುತ್ತವೆ. ಆದ್ದರಿಂದ ಗೀತೋಪದೇಶದ ತಾತ್ಪರ್ಯವು ಬರಿಯ ಇವುಗಳ ತ್ಯಾಗವಲ್ಲಿಲ್ಲ. ಇವುಗಳ ಪ್ರತಿಪಕ್ಷವಾದ ಸಾಧನಗಳನ್ನು ಕೈಗೊಳ್ಳಬೇಕು ಎಂಬುದೇ ಭಗವಂತನ ಅಭಿಪ್ರಾಯ.

ಒಮ್ಮೆ ಮನುಷ್ಯರೂ ಅಸುರರೂ ದೇವತೆಗಳೂ ತಮ್ಮ ತಂದೆಯಾದ ಬ್ರಹ್ಮನ ಬಳಿಗೆ ಬಂದು ನಮಗೆ ಉತ್ತಮವಾದ ಶ್ರೇಯಃಸಾಧನವನ್ನು ಹೇಳಬೇಕು ಎಂದು ಬೇಡಿಕೊಂಡರಂತೆ. ಆಗ ಬ್ರಹ್ಮನು ಅವರಿಗೆಲ್ಲ 'ದ' ಎಂಬ ಒಂದೇ ಅಕ್ಷರವನ್ನು ಉಪದೇಶಿಸಿದನು. ಮನುಷ್ಯರು ತಮ್ಮ ಸ್ವಭಾವವಾದ ಲೋಭವನ್ನು ಮನದಂದುಕೊಂಡು ನಮಗೆ 'ದಾನಮಾಡಿರಿ' ಎಂದು ಲೋಕಪಿತನಾದ ಬ್ರಹ್ಮನು ಉಪದೇಶಮಾಡಿರುತ್ತಾನೆ ಎಂದು ತಿಳಿದುಕೊಂಡರು ; ಅಸುರರು ತಮ್ಮ ಕ್ರೂರಸ್ವಭಾವವನ್ನು ಮನದಂದುಕೊಂಡು ನಮಗೆ 'ದಯೆಯನ್ನು ತೋರಿಸು' ಎಂದು ಉಪದೇಶಮಾಡಿರುತ್ತಾನೆ ಎಂದು ತಿಳಿದುಕೊಂಡರು ; ದೇವತೆಗಳು ಕಾಮಾಸಕ್ತರು ತಾವೆಂಬುದನ್ನು ಮನದಂದುಕೊಂಡು 'ದಾಂತರಾಗಿರಿ' ಎಂದು ಉಪದೇಶಮಾಡಿರುತ್ತಾನೆ ಎಂದು ತಿಳಿದುಕೊಂಡರು– ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಆಖ್ಯಾನವಿದೆ. ಶ್ರೀಶಂಕರಾಚಾರ್ಯರವರು ತಮ್ಮ ಭಾಷ್ಯದಲ್ಲಿ ಮನುಷ್ಯರಲ್ಲಿಯೇ ಮನುಷ್ಯತ್ವ, ಅಸುರತ್ವ, ದೇವತ್ವ– ಈ ಮೂರು ಸ್ವಭಾವವೂ ಇರುತ್ತದೆಯಾದ್ದರಿಂದ ದಾನ, ದಮ, ದಯೆ– ಈ ಮೂರನ್ನೂ ಶ್ರೇಯಸ್ಕಾಮಿಗಳಾದ ಮನುಷ್ಯರು ಆಚರಿಸಬೇಕು ಎಂಬುದು ಈ ಕಥೆಯ ಉಪದೇಶವಾಗಿದೆ ಎಂದು ಬರೆದಿರುತ್ತಾರೆ.

ಆದ್ದರಿಂದ ನಾವು ತಿಳಿದುಕೊಳ್ಳಬೇಕಾದದ್ದೇನು ? ಇಂದಿನ ನಾಗರಿಕತೆ ಎಂಬ ರೋಗದಿಂದ ನಾವು ಪಾರಾಗಬೇಕಾದರೆ ಈ ರೋಗದ ಲಕ್ಷಣಗಳಾದ ಕಾಮ, ಕ್ರೋಧ, ಲೋಭ– ಇವುಗಳನ್ನು ನಾವು ಲಕ್ಷ್ಯವಿಟ್ಟು ನೋಡಿ ಇವುಗಳನ್ನು ದಮ, ದಯೆ, ದಾನ–ಎಂಬಿವುಗಳ ಸೇವನೆಯಿಂದ ಹಿಮ್ಮೆಟ್ಟಿಸಿಕೊಳ್ಳಬೇಕು. ಆಧ್ಯಾತ್ಮಸಾಧನೆಗಳನ್ನು ಮಾಡುವಾಗ ನಾವು ಯಾವದಾದರೊಂದನ್ನು ಭದ್ರವಾಗಿ ಹಿಡಿದು ಅದನ್ನೇ ನಮ್ಮ ಜೀವನಕ್ಕೆ ಅಳವಡುವವರೆಗೂ ಮತ್ತೆಮತ್ತೆ ಸಾಧಿಸಬೇಕು. ಕೆಲವು ವೇಳೆ ಜೀವಮಾನಪರ್ಯಂತವಾಗಿಯೂ ಒಂದೇ ಸಾಧನವನ್ನು ಅಭ್ಯಾಸಮಾಡಬೇಕಾಗುವದು. ಏಕೆಂದರೆ ಅದು ನಮಗೆ ದಕ್ಕುವದು ಅಷ್ಟು ದುಸ್ಸಾಧ್ಯವಾಗಿರುತ್ತದೆ. ಆದರೆ ಆದೊಂದು ಸಾಧನವು ಅಳವಟ್ಟಿತೆಂದರೆ ಅದರ ಜೊತೆಗೆ ಉಳಿದ ದೈವೀ ಸಂಪತ್ತಿನ ಗುಣಗಳೂ ಕೊಂಡಿಯನ್ನೆಳೆದರೆ ಸರಪಳಿಯೇ ಬರುವಂತೆ–ಕೈವಶವಾಗುವವು. ಉದಾಹರಣೆಗೆ ಜಿಪುಣತನವನ್ನು ಗೆಲ್ಲಲು ದಾನವನ್ನು ನಾವು ಸಾಧಿಸುವದಾದರೆ ಅದು ದಕ್ಕಿದಂತೆಲ್ಲ ಔದಾರ್ಯವೂ ಪ್ರೇಮವೂ ಪರೋಪಕಾರಬುದ್ಧಿಯೂ ಅಂತಃಕರಣಶುದ್ಧಿಯೂ ಒಂದೊಂದಾಗಿ ಮೂಡುವವು. ಹೀಗೆಯೇ ಮುಂದುವರಿದಾಗ ನಾವು ವೇದಾಂತತತ್ತ್ವಜ್ಞಾನಕ್ಕೆ ಅಧಿಕಾರಿಗಳಾಗುವೆವು. ಆಗ ನಾವು ಶ್ರೇಯೋಭಾಗಿಗಳಾಗುವೆವು. ಈ ದಮಾದಿಗಳನ್ನು ಅಭ್ಯಾಸಮಾಡುವದಕ್ಕೆ ಉಪಾಯವೇನೆಂಬುದನ್ನು ನಾವು ವೇದಾಂತದಿಂದಲೇ ಅರಿತುಕೊಂಡು ಕೃತಾರ್ಥರಾಗಬೇಕಾಗಿದೆ.

# ೧. ವೇದಾಂತದೃಷ್ಟಿಯಿಂದಾಗುವ ಲಾಭ

(17-2-54)

## ಮೇಲಾಟ, ವೇಗ, ಯಂತ್ರ

ನಿನ್ನೆಯ ದಿನ ಆಧುನಿಕಜನಜೀವನದ ರೂಪರೇಖೆಯನ್ನು ತೋರಿಸಿದ್ದಾಯಿತು ; ನಮ್ಮ ವ್ಯವಹಾರದಲ್ಲಿ ಕಾಮಕ್ರೋಧಲೋಭಗಳ ಹಾವಳಿಯು ಪ್ರಬಲವಾಗಿದೆ ಎಂಬುದನ್ನು ಕಂಡುಕೊಂಡದ್ದಾಯಿತು. ಇದರ ಫಲವಾಗಿ ಮೇಲಾಟವೂ ಅದಕ್ಕೆ ಸಹಾಯಕವಾಗಿ ವೇಗದಿಂದ ಕೆಲಸಮಾಡುವದೂ ಅವಶ್ಯವಾಗಿಬಿಟ್ಟಿವೆ ಎಂಬುದನ್ನೂ ತಿಳಿದದ್ದಾಯಿತು. ಈ ವೇಗಕ್ಕೆ ಅನುಕೂಲವಾಗಿರುವಂತೆ ಬಗೆಬಗೆಯ ಯಂತ್ರಗಳನ್ನು ನಾವು ನಿರ್ಮಿಸಿಕೊಂಡಿರುತ್ತೇವೆ. ಎಂಬುದನ್ನೂ ಹೇಳಿದ್ದಾಗಿದೆ. ಈಗ ಈ ಯಂತ್ರಗಳ ಆಗಮನದ ಫಲಿತ ವೇನೆಂಬುದನ್ನು ಸ್ವಲ್ಪ ಬಿಚ್ಚಿ ನೋಡುವದು ಅವಶ್ಯವಾಗಿದೆ.

## ಯಂತ್ರಗಳಿಂದಾಗಿರುವ ಅನರ್ಥ

ನಮ್ಮ ಕಾಲವನ್ನು ಯಂತ್ರಯುಗವೆಂದು ಭಾವಿಸಿದರೆ ಈ ವ್ಯವಹಾರದ ಸ್ವರೂಪವನ್ನೆಲ್ಲ ವರ್ಣಿಸಿದಂತೆ ಆಗುತ್ತದೆ. ಜನರಿಗೆ ಅವಶ್ಯವಾಗಿ ಬೇಕಾಗಿರುವ ಅನ್ನ, ನೀರು, ಬಟ್ಟೆ, ಬೆಳಕು– ಮುಂತಾದವುಗಳು ನಮಗೆ ಈಗ ಯಂತ್ರದಿಂದಲೇ ಆಗಬೇಕಾಗಿವೆ. ನಮಗೆ ಬೇಕಾದ ಪುಸ್ತಕ, ಪಾಠ ಪ್ರವಚನಗಳು, ಸುದ್ದಿಗಳು, ಪ್ರಯಾಣ–ಮುಂತಾದವುಗಳಿಗಂತೂ ಅವಶ್ಯವಾಗಿ ಯಂತ್ರವು ಬೇಕು. ಯಂತ್ರವು ಮೊದಲು ಆಯಾಸವನ್ನು ಕಡಿಮೆ ಮಾಡುವದಕ್ಕೆ ಉಪಕರಣವಾಗಲೆಂಬ ಉದ್ದೇಶದಿಂದ ನಿರ್ಮಿತವಾಯಿತು. ಆದರೆ ಯಂತ್ರಗಳು ನಮ್ಮ ಕಾಯಕಷ್ಟವನ್ನೂ ಇಂದ್ರಿಯಗಳ ಶ್ರಮವನ್ನೂ ಮನಸ್ಸಿನ ಕ್ಲೇಶವನ್ನೂ ಕಡಿಮೆಮಾಡುತ್ತಾ ಹೋದಂತೆಲ್ಲ ನಮ್ಮ ಶರೀರೇಂದ್ರಿಯಮನಸ್ಸುಗಳು ದುರ್ಬಲವಾಗುತ್ತಾ ಬಂದಿವೆ. ನಮಗೆ ಈಗ ಯಾವ ಆಧ್ಯಾತ್ಮಿಕಕಷ್ಟವು ಪರಿಹಾರವಾಗಬೇಕಾದರೂ ಯಂತ್ರದಿಂದಲೇ ಆಗಬೇಕಾಗಿ ಬಂದಿದೆ. ಯಂತ್ರಗಳು ಅಕಲ್ಪನೀಯವೇಗದಿಂದ ಸಿದ್ಧಿಗೊಳಿಸುವ ಸಾಮಾನು

ಗಳನ್ನು ವಿನಿಯೋಗಿಸುವ ಬಗೆಯನ್ನು ಕಾಣದೆ ಜನರು ಹೊಸ ಹೊಸ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗಿ ಬಂದಿದೆ. ರಕ್ತಬೀಜಾಸುರನ ರಕ್ತದ ಒಂದು ತೊಟ್ಟು ನೆಲದಮೇಲೆ ಬಿದ್ದರೆ ಸಾವಿರಗಟ್ಟಲೆಯಾಗಿ ಅಸುರರು ಹುಟ್ಟುತ್ತಿದ್ದಂತೆ ಒಂದೊಂದು ಯಂತ್ರಕ್ಕೂ ಉಪಯಂತ್ರಗಳು ಲೆಕ್ಕವಿಲ್ಲದಷ್ಟು ಆಗುತ್ತಾ ನಡೆದಿದೆ.

ಮಲೆನಾಡಿನಲ್ಲಿ ಚೌಡಿಗಳಿರುವವೆಂದೂ ಅವನ್ನು ಸಾಕಿದವರಿಗೆ ಅವು ಬೇಕಾದ ಕೆಲಸವನ್ನು ಮಾಡಿಕೊಡುವವಾದರೂ ತಕ್ಕಷ್ಟು ಕೆಲಸವನ್ನು ಕೊಡದೆಹೋದರೆ ಯಜಮಾನನನ್ನೇ ನುಂಗಿಬಿಡುವವೆಂದೂ ಕೆಲವರ ನಂಬಿಕೆಯಿದೆ. ಅದು ನಿಜವಾಗಲಿ ಸುಳ್ಳಾಗಲಿ, ಯಂತ್ರಗಳೇನೋ ಇಂಥ ಚೌಡಿಗಳಾಗಿಬಿಟ್ಟಿವೆ. ಏಕೆಂದರೆ ಅವಕ್ಕೆ ಕೆಲಸವನ್ನು ಒದಗಿಸುವದು ಕಷ್ಟವಾಗಿಬಿಟ್ಟಿದೆ. ನಮ್ಮ ಜಗಚ್ಚಕ್ರವು ಯಂತ್ರಗಳಿಂದಲೇ ತಿರುಗುತ್ತಿರುವದರಿಂದ ನಮಗೆ ಈಗೇನು ಮಾಡಬೇಕೆಂಬುದು ತೋರದಂತಾಗಿದೆ. ಜನಾಂಗಗಳು ಪೈಪೋಟಿಯಿಂದ ಸಿದ್ಧಗೊಳಿಸುತ್ತಿರುವ ವ್ಯಾಪಾರದ ಪದಾರ್ಥಗಳಿಗೆ ಗಿರಾಕಿಯನ್ನು ಹುಡುಕುವದಕ್ಕಾಗಿ ಒಬ್ಬರನ್ನೊಬ್ಬರು ಮೋಸಪಡಿಸುತ್ತಾ ನಡೆದರೂ ಅದೂ ಸಾಗದೆ ಒಬ್ಬರಮೇಲೊಬ್ಬರು ರೇಗಿ ಯುದ್ಧಕ್ಕೆ ಕಾಲುಕೆರೆಯುತ್ತಿರಬೇಕಾಗಿದೆ. ನಮ್ಮ ಯಂತ್ರಗಳು ಹೊಸಹೊಸ ಘಾತುಕಶಸ್ತ್ರಾಸ್ತ್ರಗಳನ್ನು ನಿರ್ಮಾಣಮಾಡುತ್ತಿರುವದರಿಂದ ಆರ್ಥಿಕಯುದ್ಧಗಳ ಪರಂಪರೆಯು ತಲೆದೋರುತ್ತಿದೆ. ಎಲ್ಲರೂ ಇನ್ನು ಮುಂದೇನಾಗುವದೋ ಎಂದು ಕಣ್ಣುಕಣ್ಣು ಬಿಡುವಂತಾಗಿದೆ. ಈಗ ನಮಗೆ ಯಂತ್ರವು ಉಪಕರಣವಾಗಿರುವದರ ಬದಲು ನಾವೇ ಯಂತ್ರಕ್ಕೆ ಅಡಿಯಾಳಾಗಿಬಿಟ್ಟಿರುವೆವು.

## ಈಗಿನ ನಾಗರಿಕತೆಯು ನರಕವಾಗಿದೆ

ಈಗ ಯಂತ್ರಗಳಿಂದಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುವಹಾಗೂ ಇಲ್ಲ. ಅವುಗಳನ್ನು ಬಿಟ್ಟು ನಾವು ಹಿಂಜರಿಯುವಂತೆಯೂ ಇಲ್ಲ. ಅಶ್ವತ್ಥಾಮನು ತಾನು ಪ್ರಯೋಗಿಸಿದ ನಾರಾಯಣಾಸ್ತ್ರವನ್ನು ಉಪಸಂಹಾರ ಮಾಡುವ ಕ್ರಮವನ್ನು ಅರಿಯದೆ ಕಂಗೆಟ್ಟಿರುವಲ್ಲಿ ಲೋಕದಲ್ಲೆಲ್ಲ ಹಾಹಾಕಾರವುಂಟಾದಂತೆ ಜನರಿಗೂ ಜನಾಂಗಗಳಿಗೂ ಒಬ್ಬರಿಗೊಬ್ಬರ ವಿಷಯದಲ್ಲಿ

ಸಂಶಯವೂ ಒಬ್ಬರಿಂದೊಬ್ಬರಿಗೆ ಭೀತಿಯೂ ಉಂಟಾಗಿ- 'ಸಂಶಯಾತ್ಮನಾದವನಿಗೆ ಈ ಲೋಕದ ಭೋಗವಿಲ್ಲ. ಪರಲೋಕದ ಗತಿಯಿಲ್ಲ. ಪರಮಾರ್ಥಸುಖವಂತೂ ಇಲ್ಲವೇ ಇಲ್ಲ' ಎಂಬ ಗೀತೋಕ್ತಿಗೆ ಧರಾಮಂಡಲವೆಲ್ಲವೂ ಉದಾಹರಣೆಯಾಗಿಬಿಟ್ಟಿದೆ.

ಸದ್ಯಕ್ಕೆ ನಮಗೆ ವ್ಯವಹಾರವೆಲ್ಲವೂ ನರಕವಾಗಿಬಿಟ್ಟಿರುತ್ತದೆ. ಸಹಿಸಲಾರದ ವ್ಯಥೆಯು ನರಕವಲ್ಲದಿದ್ದರೆ ಮತ್ತೇನು ? ಆದರೂ ನಮಗೆ ಇದು ಅಪರಿಹಾರ್ಯವಾಗಿರುವದರಿಂದ ಇದಕ್ಕೊಂದು ಗೌರವದ ಹೆಸರು ಕೊಟ್ಟುಕೊಂಡಿರುತ್ತೇವೆ. ಒಬ್ಬಾನೊಬ್ಬ ಸ್ವಾಮಿಗಳನ್ನು ಜನರು ನೋಡುವದಕ್ಕೆ ಬಂದಾಗ ಅವರು ಮಾರ್ಗಾಯಾಸದಿಂದ ನಿದ್ರೆಹೋಗಿದ್ದರಂತೆ ; ಆದರೆ ಏಜಂಟರು 'ಶ್ರೀಗಳವರು ಸಮಾಧಿಯಲ್ಲಿರುತ್ತಾರಾದ್ದರಿಂದ ಈಗ ಅವಕಾಶವಿಲ್ಲ' ಎಂದರಂತೆ ! ನಿದ್ರೆಯನ್ನು ಸಮಾಧಿಯೆಂಬ ಗೌರವದ ಹೆಸರಿನಿಂದ ಕರೆದಮಾತ್ರಕ್ಕೆ ಅದು ನಿದ್ರೆಯಲ್ಲದೆಹೋಗುವದೆ? ಈಗ ಚಲಾವಣೆಯಲ್ಲಿರುವ ಒಂದು ನಾಣ್ಯವನ್ನು ನಾವು 'ರೂಪಾಯಿ' ಎಂದು ಕರೆದುಕೊಂಡಮಾತ್ರದಿಂದ ಅದಕ್ಕೆ ಹಿಂದಿನ ರೂಪಾಯಿಯ ಬೆಲೆ ಬಂದೀತೆ ? ಎಂದಿಗೂ ಇಲ್ಲ. ಹೀಗೆಯೇ ನಾವು ನಮ್ಮ ಸ್ಥಿತಿಯನ್ನು 'ನಾಗರಿಕತೆ' ಎಂಬ ಗೌರವಯುತವಾದ ಹೆಸರಿನಿಂದ ಕರೆದುಕೊಂಡಮಾತ್ರದಿಂದ ಅದರ ನಿಜವು ಬೇರ್ಪಡಲಾರದು.

## ಆತ್ಮಜ್ಞಾನಿಗಳಿಂದ ನಮಗೆ ಆಗಬಹುದಾದ ಸಹಾಯ

ನಮ್ಮ ಸ್ಥಿತಿಯು ನಿಜವಾಗಿಯೂ ಬಹಳ ಶೋಚನೀಯವಾಗಿದೆ. ನಾವು ಕಾಮಬಂಧನಗಳಲ್ಲಿ ಬಿದ್ದು ಕೊಳೆಯುತ್ತಿದ್ದೇವೆ. 'ಹೀಗಾದರೆ ಸುಖವು ಸಿಕ್ಕೀತು, ಹಾಗಾದರೆ ಸಿಕ್ಕೀತು'–ಎಂದು ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಹೋಗುವದಕ್ಕೆ ಬಯಸುತ್ತಿದೇವೆ. ಆದರೆ ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ಹೋದಮಾತ್ರದಿಂದ ಏನಾದೀತು ? ಎರಡೂ ಬಂಧನಾಗಾರಗಳೇ ಅಲ್ಲವೆ ? ನಮ್ಮ ಈಗಿನ ದುಃಖವನ್ನು ದುಃಖಾತೀತವಾದ ಸ್ಥಿತಿಯಲ್ಲಿರುವ ಜ್ಞಾನಿಗಳು ಮಾತ್ರ ಪರಿಶೀಲಿಸಬಲ್ಲರು; ಅವರುಮಾತ್ರವೇ ನಮಗೆ ಸುಖದ ಮಾರ್ಗವನ್ನು ತೋರಿಸಿಕೊಡಬಲ್ಲರು. ಭಾರತದಲ್ಲಿ ಹೇಳಿರುವಂತೆ–

ಪ್ರಜ್ಞಾಪ್ರಾಸಾದಮಾರುಹ್ಯ ಹ್ಯಶೋಚ್ಯಃ ಶೋಚತೋ ಜನಾನ್ ।
ಭೂಮಿಷ್ಠಾನಿವ ಶೈಲಸ್ಥಃ ಸರ್ವಾನ್ ಪ್ರಾಜ್ಞೋಽನುಪಶ್ಯತಿ ॥

ಯಾರಿಗೆ ಯಾವ ಬಗೆಯ ಅವಿದ್ಯಾಕಾಮಗಳೂ ಇಲ್ಲವೋ ಅವರು ಪ್ರಜ್ಞೆ, ಸರಿಯಾದ ತಿಳಿವಳಿಕೆ, ಎಂಬ ಉಪ್ಪರಿಗೆಯ ಮೇಲೇರಿದವರು. ಅವರನ್ನು ಕುರಿತು ಯಾರೂ ಏತಕ್ಕಾಗಿಯೂ ಶೋಕಿಸಬೇಕಾದದ್ದಿರುವದಿಲ್ಲ. ಬೆಟ್ಟವನ್ನೇರಿರುವವನಿಗೆ ನೆಲದಮೇಲೆ ನಡೆಯುತ್ತಿರುವವರೆಲ್ಲ ಹೇಗೆ ಪೂರ್ಣವಾಗಿ ಕಾಣಿಸುತ್ತಿರುವರೋ ಹಾಗೆ, ಅಂಥವರಿಗೆ ವ್ಯವಹಾರದಲ್ಲಿ ಬಗೆಬಗೆಯ ಶೋಕಮೋಹಗಳಿಂದೊಡಗೂಡಿ ವ್ಯಥೆಪಡುತ್ತಿರುವ ನಮ್ಮಗಳ ಸ್ಥಿತಿಯು ನಿರ್ಮಲವಾಗಿ ಪೂರ್ಣವಾಗಿ ಒಮ್ಮೆಗೇ ಕಂಡುಬರುತ್ತದೆ. ಅಂಥ ಪ್ರಾಜ್ಞರು 'ಅಯ್ಯೋ! ಇವರು ತಪ್ಪುದಾರಿಯನ್ನು ಹಿಡಿದು ಸುಮ್ಮನೆ ಸಂಕಟಪಡುತ್ತಿರುವರಲ್ಲ!' ಎಂದು ನಮ್ಮಮೇಲೆ ಅನುಕಂಪೆಯಿಂದ ನಮಗೆ ಸರಿಯಾದ ಮಾರ್ಗವನ್ನು ತಿಳಿಸಿಕೊಡುತ್ತಾರೆ. ಇದು ಜ್ಞಾನಿಗಳೆಂದು ಹೆಸರಿಟ್ಟುಕೊಂಡಿರುವ ವೇದಾಂತಿಗಳ ವೃಥಾಸ್ತುತಿಯಲ್ಲ. ಈ ನಮ್ಮ ವ್ಯವಹಾರದಲ್ಲಿರುವ ದೋಷವನ್ನೂ ಇದರಿಂದಾಗುವ ಅನರ್ಥವನ್ನೂ ಮನದಟ್ಟುಮಾಡಿಕೊಂಡು ಇವೆಲ್ಲವನ್ನೂ ಪರಿತ್ಯಜಿಸಿ ಆತ್ಮಜ್ಞಾನದಲ್ಲಿಯೇ ನೆಲೆನಿಂತಿರುವ ಸ್ಥಿತಪ್ರಜ್ಞರ ಸ್ವರೂಪವರ್ಣನೆಯಿದು. ಅಂಥ ಸ್ಥಿತಪ್ರಜ್ಞರೇ ನಿಜವಾಗಿ ವೇದಾಂತಜ್ಞರು; ಅವರೇ ನಮ್ಮನ್ನು ಈ ದುಃಖಸಾಗರದಿಂದ ಪಾರುಮಾಡಬಲ್ಲರು.

## ಪುಸ್ತಕಜ್ಞಾನವು ಸಾಲದು, ಅನುಷ್ಠಾನವು ಬೇಕು

ನಮಗೆ ಸ್ಥಿತಪ್ರಜ್ಞನ ಲಕ್ಷಣವೇನೂ ತಿಳಿಯದೆ ಇಲ್ಲ. ಕಾಸಿಗೊಂದು ಗೀತಾಪುಸ್ತಕವು ದೊರಕುವ ಈ ಕಾಲದಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ಗಟ್ಟಿಮಾಡಿ ಒಪ್ಪಿಸುವವರು ಹಲವರು ಇರುತ್ತಾರೆ. ನಮ್ಮಗಳಿಗೆ ಉಪನಿಷತ್ತು, ಭಗವದ್ಗೀತೆ–ಇವೆಲ್ಲ ತಿಳಿದೇ ಇವೆ. ಚತುರ್ವೇದವಿದನು ಎಂದರೆ ಋಗ್ಯಜುಃಸಾಮಾಥರ್ವವೇದಗಳೇ ನಾಲ್ಕು ವೇದಗಳು ಎಂದು ಬಲ್ಲವನು ಎಂದು ಹೇಳುವವರಂತೆ ನಾವು ಈ ಗ್ರಂಥಗಳ ಹೆಸರನ್ನು ತಿಳಿದಿದೇವೆ, ಈ ಗ್ರಂಥಗಳನ್ನು ಓದಿಕೊಂಡೂ ಇರುತ್ತೇವೆ; ಅವುಗಳ ವಿಷಯದಲ್ಲಿ ಉಪನ್ಯಾಸಮಾಡುವದಕ್ಕೂ ನಮಗೆ ಚೆನ್ನಾಗಿ ಬರುತ್ತದೆ; ಅವುಗಳನ್ನು ಕುರಿತು ಅನೇಕ ಲೇಖನಗಳನ್ನೂ

ನಾವು ಬರೆದೇವು. ಆದರೆ ವೈದ್ಯಪುಸ್ತಕಗಳನ್ನು ನೋಡಿದವರಿಗೆ ಔಷಧ ಪ್ರಯೋಗವು ಹೇಗೆ ಗ್ರಂಥಮಾತ್ರದಿಂದ ತಿಳಿಯಲಾರದೋ ಹಾಗೆ ನಮಗೆ ಪುಸ್ತಕಜ್ಞಾನವಿದ್ದರೂ ಅವುಗಳಲ್ಲಿರುವದರ ಅನುಭವವಿಲ್ಲ. ಈಗ ನಮ್ಮಲ್ಲಿ ಅನೇಕರಿಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಹಾಡೇ ಆಗಿದೆ ; ಅನೇಕ ಜನರಿಗೆ ಆಯಾ ವಿಷಯದ ಜ್ಞಾನವಿದೆ, ಪಾಂಡಿತ್ಯಪ್ರದರ್ಶನಶಕ್ತಿಯಿದೆ ; ಆದರೆ ಅವರಿಗೆ ತಮ್ಮ ತಿಳಿವಳಿಕೆಯನ್ನು ಅನುಷ್ಠಾನಕ್ಕೆ ತರುವದಕ್ಕೆ ಬರುತ್ತಿಲ್ಲ. ಕಾಮವನ್ನು ದಮದಿಂದಲೂ ಕ್ರೋಧವನ್ನು ದಯೆಯಿಂದಲೂ ಲೋಭವನ್ನು ದಾನದಿಂದಲೂ ಗೆಲ್ಲಬೇಕೆಂಬ ಆಧ್ಯಾತ್ಮಗ್ರಂಥಗಳ ಉಪದೇಶವೇನೋ ನಮಗೆ ಗೊತ್ತಿದೆ. ಆದರೆ ಆರೋಗ್ಯಶಾಸ್ತ್ರದ ತತ್ತ್ವಗಳನ್ನು ಬೋಧಿಸಬಲ್ಲ ಉಪಾಧ್ಯಾಯನು ನಿತ್ಯರೋಗಿಯಾಗಿರುವಂತೆ ನಾವು ಈ ಉಪದೇಶಗಳನ್ನು ನಮಗಾಗಿ ಉಪಯೋಗಿಸಿಕೊಂಡಿಲ್ಲ; ಉಪಯೋಗಿಸಿಕೊಳ್ಳುವ ಅವಕಾಶವನ್ನಾಗಲಿ ಮನಸ್ಸನ್ನಾಗಲಿ ಸಂಪಾದಿಸಿಕೊಂಡೂ ಇರುವದಿಲ್ಲ.

## ನಮ್ಮ ಜ್ಞಾನವು ದೋಷಯುತವಾದದ್ದು

ಒಂದು ನಗರದಲ್ಲಿ ಹೊಸದಾಗಿ ನಲ್ಲಿಗಳ ಮೂಲಕ ನೀರಿನ ಸರಬರಾಯಿ ಆಗಿತ್ತು. ಆ ಸಮಯಕ್ಕೆ ಅಲ್ಲಿಯ ಜನರಿಗೆ ಒಂದು ಬಗೆಯ ಜ್ವರವು ಪ್ರಬಲವಾಗಿ ಕಾಣಿಸಿಕೊಂಡಿತು; ಆದಕ್ಕೆ ಇನಾಕ್ಯುಲೇಷನ್ ಮುಂತಾದ ಉಪಾಯಗಳನ್ನು ಕೈಗೊಂಡಮೇಲೂ ಆ ಜ್ವರವು ಹೋಗಲಿಲ್ಲ. ಅಷ್ಟರಲ್ಲಿ ಯಾರೋ ನಲ್ಲಿಯೊಳಕ್ಕೆ ಬರುತ್ತಿದ್ದ ನೀರಿಗೆ ಮೂಲದಲ್ಲಿಯೇ ಯಾವದೋ ಒಂದು ರೊಚ್ಚೆ ಬಂದುಸೇರುತ್ತಿದೆ ಎಂಬುದನ್ನು ಕಂಡುಹಿಡಿದರು. ಅದನ್ನು ತಪ್ಪಿಸಿದ ಬಳಿಕ ಕ್ರಮಕ್ರಮವಾಗಿ ರೋಗವು ಮಾಯವಾಯಿತು. ಈ ದೃಷ್ಟಾಂತವೇ ಪ್ರಕೃತವಿಚಾರಕ್ಕೂ ಅನ್ವಯಿಸುತ್ತದೆ. ಈಗ ನಮಗೆ ಒದಗಿಬರುತ್ತಿರುವ ಜ್ಞಾನಪ್ರವಾಹದಲ್ಲಿ ಮೂಲದಲ್ಲಿಯೇ ಒಂದು ದೋಷವು ಸೇರಿಕೊಂಡಿರುತ್ತದೆ. ಇದನ್ನು ತಪ್ಪಿಸಿದರೆ ನಮ್ಮ ಜ್ಞಾನವೂ ಪವಿತ್ರವಾಗುತ್ತದೆ, ವ್ಯವಹಾರವೂ ರೋಗರಹಿತವಾಗುತ್ತದೆ. ನಮ್ಮ ಜ್ಞಾನದಲ್ಲಿರುವ ಈ ದೋಷವನ್ನು ಕಂಡುಹಿಡಿದು ಅದನ್ನು ಪರಿಹರಿಸುವ ಉಪಾಯವನ್ನು ವೇದಾಂತದಲ್ಲಿ ತಿಳಿಸಿಕೊಟ್ಟಿರುತ್ತದೆ. ನಾವು ಸುಮ್ಮನೆ ಈ ಉಪದೇಶವನ್ನು ಗಟ್ಟಿಮಾಡಿದರೆ

ಆಗಲಿಲ್ಲ ; ಅದನ್ನು ಪ್ರಯತ್ನಪೂರ್ವಕವಾಗಿ ಅನುಷ್ಠಾನಕ್ಕೆ ಇಳಿಸಬೇಕು. ಈ ಜಗತ್ತನ್ನು ಬೇರೆಬೇರೆಯ ಎರಡು ದೃಷ್ಟಿಗಳಿಂದ ನೋಡಬಹುದು. ನಮ್ಮಲ್ಲಿರುವ 'ನಾನು' ಎಂಬವರ ದೃಷ್ಟಿಯಿಂದ ನೋಡುವದು ಮೊದಲನೆಯ ಕ್ರಮವು. ಈ ದೃಷ್ಟಿಯನ್ನು ಬಾಹ್ಯದೃಷ್ಟಿ ಎನ್ನುವರು. 'ಈ ಜಗತ್ತನ್ನು ನೋಡುತ್ತಿರುವವನು ನಾನು ; ಇದೆಲ್ಲವೂ ನನಗೇ ಆಗಬೇಕು'—ಎಂಬುದು ಈ ದೃಷ್ಟಿಯುವರ ಮನೋಭಾವ. ಈ ದೃಷ್ಟಿಯು ಯಾರುಯಾರಿಗೆ ಇರುವದೋ ಅವರಿಗೆಲ್ಲ ಇದೇ ಭಾವವಿರುವದರಿಂದ ಈ ದೃಷ್ಟಿಯವರಲ್ಲಿ ರಾಗದ್ವೇಷಗಳು ಬಲವಾಗುವದು ಸ್ವಾಭಾವಿಕವಾಗಿದೆ. ನಮ್ಮಂತೆಯೇ ಮತ್ತೊಬ್ಬರೂ ನಾವು ಬೇಕೆನ್ನುವ ವಸ್ತುಗಳನ್ನು ಬಯಸುವದರಿಂದ ಪೈಪೋಟಿಯಾಗುವದೂ ಸಹಜವಾಗಿದೆ. ಇಂಥವರು ತಮಗೆ ಇಷ್ಟವಾದ ವಸ್ತುಗಳನ್ನು ವಶಪಡಿಸಿಕೊಂಡವರನ್ನು ಹೊಡೆದಟ್ಟುವದಕ್ಕೆ ಪ್ರಯತ್ನಿಸುವರು. ಇದರಿಂದ ಜೀವನದಲ್ಲಿ ಒಬ್ಬರಿಗೊಬ್ಬರಿಗೆ ಘರ್ಷಣೆಯು ತಪ್ಪದೆ ಉಂಟಾಗುತ್ತದೆ. ಆದ್ದರಿಂದ ಬರಿಯ 'ನಾನು' ಎಂಬ ದೃಷ್ಟಿಯಿಂದ ಎಲ್ಲವನ್ನೂ ನೋಡುವ ಜ್ಞಾನದಲ್ಲಿ ದೋಷವಿದೆ ಎಂಬುದು ಸ್ಪಷ್ಟವಾಗಿದೆ.

## ವೇದಾಂತಿಗಳ ದೃಷ್ಟಿ

ಈ ದೋಷವನ್ನು ಕಂಡುಕೊಂಡಿರುವ ಜ್ಞಾನಿಗಳ ದೃಷ್ಟಿಯು ಬೇರೊಂದು ವಿಧವಾಗಿರುತ್ತದೆ. ಅದರ ಅಭಿಪ್ರಾಯವೇನೆಂದರೆ :

**ತ್ಯಕ್ತ್ವಾ ಮಮಾಹಮಿತಿ ಬನ್ಧಕರೇ ಪದೇ ದ್ವೇ**
**ಮಾನಾಪಮಾನಸದೃಶಾಃ ಸಮದರ್ಶಿನಶ್ಚ ।**
**ಕರ್ತಾರಮನ್ಯಮವಗಮ್ಯ ತದರ್ಪಿತಾನಿ**
**ಕುರ್ವನ್ತಿ ಕರ್ಮಪರಿಪಾಕಫಲಾನಿ ಧನ್ಯಾಃ ॥**

"ನಾನು, ನನ್ನದು—ಎಂಬ ಬಂಧಕರವಾದ ಎರಡು ಪದಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು, ಮಾನ ಅಪಮಾನ—ಇವುಗಳನ್ನು ಸಮಾನವಾಗಿ ಕಾಣುತ್ತಾ ಸಮದರ್ಶಿಗಳಾಗಿರುವವರು, ಎಲ್ಲಕ್ಕೂ ಕರ್ತೃವಾದ ಪರಮಾತ್ಮನೊಬ್ಬನಿದಾನೆ ಎಂಬುದನ್ನು ತಿಳಿದು ತಾವು ಮಾಡಿದ ಕರ್ಮಗಳ ಫಲಗಳನ್ನು ಆತನಿಗೆ ಸಮರ್ಪಣೆಮಾಡುವರು. ಅವರೇ ಧನ್ಯರು !"

ವೇದಾಂತಿಗಳು ಈ ಎರಡನೆಯ ದೃಷ್ಟಿಯನ್ನು ಅವಲಂಬಿಸಿರುತ್ತಾರೆ. ಅವರ ಅಭಿಪ್ರಾಯದಂತೆ ನಾನು, ನನ್ನದು—ಎಂಬಿವೇ ನಮ್ಮ ಸುಖಕ್ಕೆ ಅಡ್ಡಿಯಾಗಿರುವ ಭಾವಗಳು. ಒಮ್ಮೆ ಒಬ್ಬ ಹುಡುಗನು ಬಾದಾಮಿಗಳನ್ನು ತುಂಬಿದ್ದ ಒಂದು ಗಡಿಗೆಯಿಂದ ಒಂದು ಹಿಡಿ ಬಾದಾಮಿಯನ್ನು ಹೊರಕ್ಕೆ ತೆಗೆಯುವದಕ್ಕೆ ಪ್ರಯತ್ನಿಸಿದನಂತೆ. ಆದರೆ ಅವನ ಹಿಡಿಗಿಂತ ಗಡಿಗೆಯ ಬಾಯಿ ಸಣ್ಣದಾಗಿದ್ದದ್ದರಿಂದ ಅವನ ಕೈ ಈಚೆಗೆ ಬಾರದಾಯಿತು. ಅವನು ಪ್ರಯತ್ನಪಟ್ಟಷ್ಟೂ ಕೈಗೆ ನೋವಾಗುತ್ತಿತ್ತೇ ಹೊರತು ಕೈಮಾತ್ರ ಈಚೆಗೆ ಬರಲಿಲ್ಲ. ಅವನ ದುರವಸ್ಥೆಯನ್ನು ಕಂಡ ಮುದುಕನೊಬ್ಬನು 'ಅಪ್ಪ, ಒಂದೇಸಲಕ್ಕೆ ಹಿಡಿತುಂಬ ಬಾದಾಮಿಯನ್ನು ತೆಗೆದುಕೊಳ್ಳುವೆನೆಂಬ ಹಠವನ್ನು ಬಿಡು ಎರಡು ಬಾದಾಮಿಗಳನ್ನು ಕೈಬಿಡು. ಆಗ ಹೊರಕ್ಕೆ ಕೈ ಸುಲಭವಾಗಿ ಬರುವದು, ಮತ್ತೊಂದು ಸಲಕ್ಕೆ ಇನ್ನೂ ಕೆಲವು ಬಾದಾಮಿಗಳನ್ನು ತೆಗೆಯುಕೊಳ್ಳಲೂ ಬಹುದು' ಎಂದು ಬುದ್ಧಿ ಹೇಳಿದನಂತೆ ! ಈ ಕಟ್ಟುಕಥೆಯಲ್ಲಿ ಒಂದು ತತ್ತ್ವವು ಅಡಗಿದೆ. ನಾವು 'ಈ ಜಗತ್ತಿನಲ್ಲಿರುವದೆಲ್ಲ ನನ್ನದೇ, ಇದು ನನಗೇ ಆಗಬೇಕು'—ಎಂಬ ಹಿಡಿಯದಾಸೆಯಿಂದ ಮತ್ತೊಬ್ಬರಿಗೆ ಸಿಕ್ಕದಂತೆ ಎಲ್ಲವನ್ನೂ ಒಂದೇಸಲಕ್ಕೆ ದೋಚಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವೆವು. ಇದರಿಂದ ನಮಗೆ ಬಗೆಬಗೆಯ ದುಃಖಗಳು ಒದಗುತ್ತಿರುವವು. ಈ ದೃಷ್ಟಿಯನ್ನು ಬಿಟ್ಟು ನಾವು 'ಇದೆಲ್ಲವೂ ಬ್ರಹ್ಮಮಯವಾಗಿದೆ, ಈ ಬ್ರಹ್ಮವು ನಮ್ಮೆಲ್ಲರ ಆತ್ಮನಾಗಿರುವದರಿಂದ, ಇದು ಸರ್ವರಿಗೂ ಸುಖದಾಯಕವಾಗಿದೆ!' ಎಂಬ ವಿಶಾಲವಾದ ದೃಷ್ಟಿಯನ್ನು ಪಡೆದುಕೊಂಡರೆ ಎಲ್ಲರೂ ಪರಸ್ಪರ ಸಹಾಯದಿಂದ ಈ ಜಗತ್ತಿನಲ್ಲಿ ನಮನಮಗೆ ಬೇಕಾದಷ್ಟು ಸುಖವನ್ನು ತೋಡಿಕೊಳ್ಳುವದಕ್ಕೆ ಬರುವಂತಿದೆ. ಈ ಎರಡನೆಯ ನಿರ್ದುಷ್ಟ ದೃಷ್ಟಿಯನ್ನೇ ವೇದಾಂತವು ತಿಳಿಸಿಕೊಡುವದಕ್ಕೆ ಹೊರಟಿರುತ್ತದೆ.

## ಇದೆಲ್ಲವೂ ಬ್ರಹ್ಮವೇ ಎಂಬುದು ಶಾಸ್ತ್ರೀಯದೃಷ್ಟಿ

ನಮಗೆ ಜಗತ್ತು ಸ್ಪಷ್ಟವಾಗಿ ಕಾಣಿಸುತ್ತಿದೆ. ಇದನ್ನು ಬಿಟ್ಟು ಬ್ರಹ್ಮವೆಂಬ ಮತ್ತೊಂದು ತತ್ತ್ವವು ಇದೆ ಎಂದು ವೇದಾಂತವು ಹೇಳಿದ ಮಾತ್ರದಿಂದ ಅದನ್ನು ಹೇಗೆ ನಂಬುವದು ? ಹಾಗೆ ಮಾಡಿದರೆ ಎಚ್ಚರದ ಪರಮಾರ್ಥ

ವನ್ನು ಬಿಟ್ಟು ಕನಸಿನ ಹುಸಿತೋರಿಕೆಗಳನ್ನು ನಿಜವೆಂದು ಹಿಡಿದಂತೆ ಆಗುವ ದಿಲ್ಲವೆ ?—ಎಂಬ ಶಂಕೆಯು ಕೆಲವರಿಗೆ ಉಂಟಾಗಬಹುದು. ಆದರೆ ಇಂಥ ಶಂಕೆಯು ಯಾವ ಶಾಸ್ತ್ರಕ್ಕಾದರೂ ಅನ್ವಯಿಸುತ್ತದೆ. ಏಕೆಂದರೆ ಶಾಸ್ತ್ರ ವೆಂದರೆ ಜಿಜ್ಞಾಸುಗಳಿಗೆ ತಿಳಿಯದೆ ಇರುವುದನ್ನು ತಿಳಿಸುವ ಸಾಧನವು. ಶಾಸ್ತ್ರದ ವಿಷಯವನ್ನು ನಾವು ಸ್ಥೂಲದೃಷ್ಟಿಯಿಂದ ನೋಡಿ ಅದರ ಬಗ್ಗೆ ಈಗಾಗಲೆ ಒಂದೊಂದು ಅಭಿಪ್ರಾಯವನ್ನು ಮಾಡಿಕೊಂಡಿರುವೆವು ; ಶಾಸ್ತ್ರವು ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿ ಆ ವಿಷಯದ ನಿಜವಾದ ಸ್ವರೂಪವನ್ನು ನಮಗೆ ತಿಳಿಸಿಕೊಡುತ್ತದೆ. ಅಲ್ಲವೆ ? ಉದಾಹರಣೆಗೆ ಎಡ್ಡಿಂಗ್ಟನ್ ಎಂಬಾತನು ಬರೆದಿರುವ 'ಪ್ರಾಕೃತಜಗತ್ತಿನ ಸ್ವಭಾವ' (The Nature of the Physical World) ಎಂಬ ಪುಸ್ತಕದಲ್ಲಿ ನಾವು ಕಾಣುವ ಪ್ರತಿಯೊಂದು ವಸ್ತುವಿಗೂ ಒಂದೊಂದು ದ್ವಿತೀಯ ಪ್ರತಿವಸ್ತು ಇದೆ ಎಂದು ಪ್ರತಿಪಾದಿಸಿದೆ. ನನ್ನೆದುರಿಗೆ ಕಾಣುತ್ತಿರುವ ಸರ್ವಪ್ರಸಿದ್ಧವಾದ ಈ ಮೇಜು ಒಂದು ; ವೈಜ್ಞಾನಿಕನು ಕಾಣುವ ಮೇಜು ಮತ್ತೊಂದು. ನಾವು ಕಾಣು ತ್ತಿರುವ ಈ ಮೇಜಿನಲ್ಲಿ ಉಪಾದಾನವಸ್ತುವಿದೆ. ಈ ಮೇಜಿನಮೇಲೆ ನಾನು ಕೈಯೂರಿದರೆ ಅದು ದೂಸಕೊಳ್ಳುವದಿಲ್ಲ ; ಅದು ಒಂದು ಘನವಸ್ತು. ಆದರೆ ವೈಜ್ಞಾನಿಕನು ಒಪ್ಪಿರುವ ಮೇಜು ಅತಿವೇಗದಿಂದ ಹಾರಾಡುತ್ತಿರುವ ಅಸಂಖ್ಯಾತವಾದ ವಿದ್ಯುತ್ಕಣಗಳಿಂದಾಗಿರುತ್ತದೆಯಂತೆ ! ಅದರ ಮೇಲಿಟ್ಟಿ ರುವ ಕಾಗದಕ್ಕೂ ಹೀಗೆಯೇ ವೈಜ್ಞಾನಿಕನ ದ್ವಿಪ್ರತಿಯು ಕಾಗದವೊಂದು ಬೇರೆ ಇದೆಯಂದೆ ; ಲೇಖನಿಗೂ ಹೀಗೆಯೇ. ವಿದ್ಯುತ್ಕಣಗಳು ವಸ್ತು ಗಳಲ್ಲ, ಬರಿಯ ಶಕ್ತಿವಿಶೇಷಗಳು—ಎಂದು ವೈಜ್ಞಾನಿಕರ ನಂಬಿಕೆ. ಈ ವೈಜ್ಞಾನಿಕರ ಮೇಜನ್ನಾಗಲಿ ಅದಿರುವ ಪ್ರಪಂಚವನ್ನಾಗಲಿ ಗ್ರಹಿಸುವದು ಸಾವಿರದಲ್ಲಿ ಒಬ್ಬನಿಗಾದರೂ ಆಗುವದೋ ಇಲ್ಲವೋ ; ಆದರೂ ಆ ಮೇಜು ಇರಬೇಕೆಂದೇ ನಾವು ನಂಬುತ್ತೇವೆ. ಏಕೆಂದರೆ ವೈಜ್ಞಾನಿಕರ ಆಪ್ತವಾಕ್ಯವು ಹಾಗೆಂದು ತಿಳಿಸುತ್ತದೆ. ಇದರಂತೆ ಖಗೋಳಶಾಸ್ತ್ರದಲ್ಲಿ ಭೂಮಿಯು ಸೂರ್ಯನ ಸುತ್ತಲೂ ತಿರುಗುತ್ತಿದೆ ಎಂದು ಅನೇಕ ಯುಕ್ತಿಗಳಿಂದ ತೋರಿಸಿ ಕೊಟ್ಟಿರುತ್ತದೆ. ಆದರೆ ನಮ್ಮ ಪ್ರತ್ಯಕ್ಷಾನುಭವದಲ್ಲಿ ಭೂಮಿಯು ಸ್ಥಿರವೆಂದೇ ತೋರುತ್ತಿದೆ. ಹೀಗಿದ್ದರೂ ಸೈನ್ಸು, ವಿಜ್ಞಾನಶಾಸ್ತ್ರವು, ತಿಳಿಸುವದೇ ಸರಿ

ಎಂದು ನಾವು ನಂಬಿ ನಮ್ಮ ಮಕ್ಕಳಿಗೆ ಈ ಖಗೋಳಶಾಸ್ತ್ರವನ್ನೇ ಪಾಠಹೇಳಿಸುತ್ತಿದ್ದೇವೆ. ಮಿಕ್ಕ ಭೌತಿಕವಿಜ್ಞಾನಶಾಸ್ತ್ರಗಳಿಗೂ ಇದು ಅನ್ವಯಿಸುತ್ತದೆ.

ಹೀಗಿರುವದರಿಂದ ಇದೆಲ್ಲವೂ ಬ್ರಹ್ಮವೇ ಎಂದು ವೇದಾಂತವು ಹೇಳಿದರೆ ನಮ್ಮ ಪ್ರತ್ಯಕ್ಷಾನುಭವಕ್ಕೆ ಹಾಗೆ ತೋರದಿದ್ದ ಮಾತ್ರಕ್ಕೆ ಅದನ್ನು ನಾವು ತಿರಸ್ಕರಿಸುವದಕ್ಕೆ ಬರುವದಿಲ್ಲ. ಏಕೆಂದರೆ ನಮ್ಮ ಪ್ರತ್ಯಕ್ಷಾನುಮಾನಗಳ ದೃಷ್ಟಿಯು ವ್ಯಾವಹಾರಿಕಪ್ರಪಂಚಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ವೇದಾಂತವೆನ್ನುತ್ತದೆ. ಪಾರಮಾರ್ಥಿಕದೃಷ್ಟಿಯಿಂದ ನೋಡಿದರೆ ಬ್ರಹ್ಮವೊಂದೇ ಇರತಕ್ಕದ್ದು. ಇದೆಲ್ಲವೂ ಬ್ರಹ್ಮವೇ–ಎಂಬುದು ಅನುಭವಕ್ಕೆ ಬರುತ್ತದೆ ಎಂದು ವೇದಾಂತಿಗಳ ಹೇಳಿಕೆ. 'ಹಾಗಾದರೆ ನಾವು ಇನ್ನುಮೇಲೆ ಮನೆ, ಬಾಗಿಲು, ಬೆಟ್ಟ, ಮನುಷ್ಯ, ಹುಲಿ, ಗಿಡ, ಮರ–ಎಂಬ ವ್ಯಾವಹಾರಿಕ ಭಾಷೆಯನ್ನು ಬಿಟ್ಟು ಎಲ್ಲವನ್ನೂ ಬ್ರಹ್ಮವೆಂದು ಕರೆಯಬೇಕೆ?'–ಎಂದು ಆಕ್ಷೇಪಿಸಬಾರದು. ಏಕೆಂದರೆ ವಿದ್ವಾಂಸರು ಅನೇಕರು ಸೂಕ್ಷ್ಮವಸ್ತುಗಳನ್ನು ಕಂಡುಹಿಡಿದಮೇಲೂ ವ್ಯಾವಹಾರಿಕಭಾಷೆಯು ಬದಲಾಯಿಸುವದಿಲ್ಲ. ದೃಷ್ಟಿಯು ಬದಲಾಯಿಸಿದರೆ ನಮ್ಮ ತಿಳಿವಳಿಕೆಯು ಬೇರ್ಪಡುವದೇ ಹೊರತು ನಮ್ಮ ಎಂದಿನ ವ್ಯಾವಹಾರಿಕಭಾಷೆಯು ಬೇರ್ಪಡುವದಿಲ್ಲ. ಭೌತಿಕವೈಜ್ಞಾನಿಕನುಕೂಡ 'ಈ ಮೇಜು ಗಟ್ಟಿಯಾಗಿದೆ' ಎಂದೇ ವ್ಯವಹರಿಸುತ್ತಾನೆ. ; ಖಗೋಳಶಾಸ್ತ್ರಜ್ಞನುಕೂಡ 'ಸೂರ್ಯನು ನೆಟ್ಟಗೆ ತಲೆಯಮೇಲಕ್ಕೆ ಬಂದಿರುತ್ತಾನೆ' ಎಂದೇ ವ್ಯವಹರಿಸುತ್ತಾನೆ. ಇದರಂತೆ ಎಲ್ಲವೂ ಬ್ರಹ್ಮವೆನ್ನುವ ವೇದಾಂತಿಗಳು ಮನೆ, ಬಾಗಿಲು–ಎಂದೇ ವ್ಯವಹರಿಸುತ್ತಾರೆ. ಆದರೂ ಇದೆಲ್ಲವೂ ಬ್ರಹ್ಮವೇ ಎಂಬುದು ಅವರ ನಂಬಿಕೆ. ಆದ್ದರಿಂದ ಎಲ್ಲವೂ ಬ್ರಹ್ಮವೇ ಹೌದೊ, ಅಲ್ಲವೊ?–ಎಂಬುದನ್ನು ನಾವು ವಿಚಾರಿಸಿ ಅರಿತುಕೊಳ್ಳುವದು ಮಾತ್ರ ಉಳಿದಿರುತ್ತದೆ, ಈ ಜ್ಞಾನವು ಬಂದರೆ ನಮಗೆ ವ್ಯವಹಾರದಲ್ಲಿ ಯಾವದಾದರೂ ಪ್ರಯೋಜನವುಂಟೆ? ಇದರಿಂದ ಜನಜೀವನದ ಮೇಲೆ ಯಾವ ಲಾಭಕರವಾದ ಪರಿಣಾಮವಾಗಬಹುದು?– ಎಂಬುದೂ ವಿಚಾರಣೀಯವಾಗಿರುತ್ತದೆ.

## ವೇದಾಂತೋಪದೇಶದಲ್ಲಿ ಶ್ರದ್ಧೆಯಿಂದಾಗುವ ಸತ್ಫಲ

ವಿದ್ಯುಚ್ಛಕ್ತಿಯು ಎಲ್ಲೆಲ್ಲಿಯೂ ವ್ಯಾಪಿಸಿದೆ ಎಂಬ ಸೈನ್ಸಿನ ಉಪದೇಶವನ್ನು ಕೇಳಿರುತ್ತೇವಷ್ಟೆ. ನಮಗೆ ಕೆಲವು ಕಡೆಗಳಲ್ಲಿ ಮಾತ್ರವೇ ಅದರ ಕಾರ್ಯವು ವ್ಯವಹಾರದಲ್ಲಿ ಕಾಣಬರುತ್ತದೆ ; ಆದರೂ ದೊಡ್ಡವರ ವಾಕ್ಯಬಲದಿಂದಲೇ ವಿದ್ಯುಚ್ಛಕ್ತಿಯ ಸಾರ್ವತ್ರಿಕವ್ಯಾಪ್ತಿಯನ್ನೂ ನಾವು ನಂಬುತ್ತೇವಲ್ಲವೆ ? ವ್ಯವಹಾರದಲ್ಲಿ ವೈಜ್ಞಾನಿಕರು ಹೇಳುವ ಎಷ್ಟೋ ಇಂಥ ತತ್ತ್ವಗಳನ್ನು ಆಪ್ತವಾಕ್ಯಮಾತ್ರದಿಂದ ನಂಬಿ ನಾವು ಅವುಗಳಿಂದಾಗುವ ಪ್ರಯೋಜನದ ಲಾಭವನ್ನು ಪಡೆದುಕೊಳ್ಳುತ್ತಿದ್ದೇವೆ. ಇದರಂತೆಯೇ ವೇದಾಂತದಲ್ಲಿ ಹೇಳಿರುವ ಈ ಬ್ರಹ್ಮವಾದವನ್ನು ವೇದಾಂತಿಗಳ ವಾಕ್ಯದಲ್ಲಿ ವಿಶ್ವಾಸವಿಟ್ಟು ವ್ಯವಹಾರಮಾಡುವದರಿಂದ ಆಗಬಹುದಾದ ಲಾಭವನ್ನು ನಾವೇಕೆ ಉಪಯೋಗಿಸಿಕೊಳ್ಳಬಾರದು ? ಆನಂದರೂಪನಾದ ಪರಮಾತ್ಮನು ಎಲ್ಲೆಲ್ಲಿಯೂ ಇರುತ್ತಾನೆಂದು ವೇದಾಂತವಾಕ್ಯಗಳು ಹೇಳುತ್ತಿವೆ ; ಇದನ್ನು ನಂಬಿದಮಾತ್ರದಿಂದಲೇ ನಮ್ಮ ವ್ಯವಹಾರವು ಎಷ್ಟೋ ಬದಲಾಯಿಸುವದು. ಎಲ್ಲೆಲ್ಲಿ ಸಂತೋಷಕ್ಕೆ ನಿಮಿತ್ತವಿದೆಯೋ, ಎಲ್ಲೆಲ್ಲಿ ಉಲ್ಲಾಸನಿಮಿತ್ತವಿದೆಯೋ, ಅದೆಲ್ಲವೂ ಪರಮಾತ್ಮನದೇ ಎಂಬ ನಂಬಿಕೆಯೊಂದು ಬಂದರೆ ಇಡಿಯ ಪ್ರಪಂಚವೇ ವಿಭೂತಿ ಎಂದಾಗುತ್ತದೆ. ಪರಮಾತ್ಮನು ಆಕಾಶದಂತೆ ಸರ್ವಗತನೂ ನಿತ್ಯನೂ ಆಗಿರುತ್ತಾನೆ; ಆದ್ದರಿಂದ ನಮಗೆ ಏನೇನು ತೋರುವದೋ ಅದರಲ್ಲೆಲ್ಲ ಅವನ ಮಹಿಮೆಯೇ ವ್ಯಕ್ತವಾಗುತ್ತಿದೆ ಎಂಬ ಪೂಜ್ಯಬುದ್ಧಿಯುಂಟಾದರೆ ನಮ್ಮ ಅಂತಃಕರಣಕ್ಕೆ ಒಂದು ಹೊಸ ಸಂಸ್ಕಾರವುಂಟಾಗುವದು. ನಮ್ಮೆಲ್ಲರ ಜೀವನಕ್ಕೂ ಜೀವನವು ಅವನೇ. ನಮ್ಮ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ—ಇವುಗಳಲ್ಲಿ ಎಲ್ಲೆಲ್ಲಿಯೂ ಆತನ ಅಚಿಂತ್ಯಶಕ್ತಿಯ ವಿಲಾಸವೇ ಇರುತ್ತದೆ—ಎಂಬ ಭಾವವು ರಾಗದ್ವೇಷಗಳ ಹುಟ್ಟನ್ನೇ ಅಡಗಿಸಿಬಿಟ್ಟೀತು. **"ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ । ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್ ॥"** (ಕ. ೨-೨-೧೩) ಪದಾರ್ಥಗಳು ಅನಿತ್ಯವಾಗಿದ್ದರೂ ಅವು ನಿತ್ಯವೆಂಬಂತೆ ಕಾಣಿಸುವ ಹಾಗೆ ಮಾಡುತ್ತಿರುವದು ಯಾವದು ? ಪರಮಾತ್ಮನ ನಿತ್ಯಮಹಿಮೆಯೇ.

ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಅನಂತಪ್ರಾಣಿಗಳಿಗೆ ಚೈತನ್ಯವನ್ನು ಕೊಟ್ಟಿರುವದು ಯಾವದು ? ನೀರು ತಣ್ಣಗಿರುವದಾದರೂ ಬೆಂಕಿಯ ಬಿಸಿಯ ಸಂಪರ್ಕದಿಂದ ಬಿಸಿಯಾಗಿ ಕಾಣುವಂತೆ ಈ ಕಾರ್ಯಕರಣಸಂಘಾತಗಳಲ್ಲೆಲ್ಲ ಚೈತನ್ಯವು ಹೊರಸೂಸುವಂತೆ ಮಾಡಿರುವ ತತ್ತ್ವವು ಯಾವದು ? ಪರಮಾತ್ಮನ ಚೈತನ್ಯವೇ. ಈ ಅನಂತರಾದ ಜೀವರುಗಳು ಬೇರೆಬೇರೆ ದೇಶಕಾಲನಿಮಿತ್ತಗಳನ್ನನುಸರಿಸಿ ತಮ್ಮತಮ್ಮ ಕರ್ಮವನ್ನು ಮಾಡುತ್ತಿರುವಲ್ಲಿ ಆಯಾ ದೇಶಕಾಲಕ್ಕೆ ತಕ್ಕಂತೆ ಸರಿಯಾಗಿ ಕರ್ಮಫಲಗಳನ್ನು ಯಾವ ಆಯಾಸವೂ ಇಲ್ಲದೆ ಕೊಡುತ್ತಿರುವ ಸರ್ವಶಕ್ತನೂ ಸರ್ವಾನುಗ್ರಾಹಕನೂ ಯಾರು ? ಏಕಕಾಲದಲ್ಲಿ ಎಲ್ಲರಿಗೂ ಒಂದಿಷ್ಟೂ ಆಯಾಸವಿಲ್ಲದೆ ಆನಂದವನ್ನು ಹಂಚಿಕೊಟ್ಟು ಜೀವನವು ಜೀವನಾರ್ಹವೆಂದು ಬಗೆಯುವಂತೆ ಮಾಡುತ್ತಿರುವ ಆನಂದಮೂಲವು ಯಾವದು ? ಆ ಪರಮಾತ್ಮನೇ. ಈ ಪ್ರಪಂಚದಲ್ಲೆಲ್ಲ ಆ ಪರಮಾತ್ಮನ ಆನಂದವೇ ತುಂಬಿತುಳುಕಾಡುತ್ತಿದೆ. ಹಾಗಿಲ್ಲದಿದ್ದರೆ ಎಂಥ ದುರವಸ್ಥೆಯಲ್ಲಿಯೂ ಇನ್ನೂ ಬದುಕಿರಬೇಕೆಂಬ ಆಶೆಯೂ ಬದುಕಿರುವದಕ್ಕೆ ಮಾಡುವ ಪ್ರಯತ್ನವೂ ಪ್ರಾಣಿಗಳಲ್ಲಿ ಹೇಗೆತಾನೆ ಇದ್ದೀತು? ಹಗಲು ಹೊತ್ತಿನಲ್ಲಿ ನಮಗೆ ಕಾಣಿಸುವದೆಲ್ಲವೂ ಹೇಗೆ ಸೂರ್ಯನ ಬೆಳಕಿನಲ್ಲಿಯೇ ಆಗಿರುವದೋ, ಹೇಗೆ ನಮ್ಮ ಶರೀರದಲ್ಲಿ ಕಾಣಬರುವ ಔಷ್ಣ್ಯ, ಚಲನವಲನ, ಇಂದ್ರಿಯಗಳ ಬಗೆಬಗೆಯ ವ್ಯಾಪಾರಗಳು, ಬುದ್ಧಿಯ ಚುರುಕುತನ-ಮುಂತಾದವೂ ಹೊರಗೆ ಕಾಣಿಸುವ ಮಳೆಬೆಳೆ ಮುಂತಾದವೂ ಆ ಸೂರ್ಯನ ಕಿರಣಗಳ ಫಲವೇ ಎಂದು ನಾವು ವ್ಯವಹಾರದಲ್ಲಿ ನೆರೆನಂಬಿರುವೆವೋ ಹಾಗೆಯೇ ಜಗತ್ತಿನಲ್ಲಿ ನಮಗೆ ಕಾಣಿಸುತ್ತಿರುವ ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ- ಎಂದು ವಿಂಗಡವಾಗಿರುವ ಜಗತ್ತಿನ ವ್ಯಾಪಾರವೆಲ್ಲವೂ-ನಮ್ಮೆಲ್ಲರ ವ್ಯಾಪಾರಗಳೆಲ್ಲವೂ ನಾವು ಯೋಚಿಸುವದೆಲ್ಲ, ನಾವು ಮಾತನಾಡುವದೆಲ್ಲ ನಾವು ಮಾಡುವದೆಲ್ಲ, ನಾವು ಪಡೆಯುವದೆಲ್ಲ—ಆ ಆನಂದರೂಪನ ಲೀಲೆಯೇ- ಎಂಬ ಭಾವನೆಯು ನಮ್ಮ ವ್ಯವಹಾರವನ್ನು ಎಷ್ಟರಮಟ್ಟಿಗೆ ಉತ್ತಮಗೊಳಿಸೀತು !

## ಬ್ರಹ್ಮದ ಅಪರೋಕ್ಷಜ್ಞಾನ

ಇದುವರೆಗೆ ನಾವು ಶ್ರದ್ಧಾಪ್ರಧಾನವಾದ ಭಾವನೆಯಿಂದಲೇ ಪರಮಾತ್ಮನ ವ್ಯಾಪ್ತಿಯ ಜ್ಞಾನದ ಫಲಿತವನ್ನು ಅಳೆದಿರುತ್ತೇವೆ. ಆದರೆ ಇದು

ಕೊನೆಯವರೆಗೂ ಬರಿಯ ಶ್ರದ್ಧಾಮಾತ್ರದಿಂದ ನಂಬುವ ಹೇಳಿಕೆಯಲ್ಲ. ಏಕೆಂದರೆ ಶಾಸ್ತ್ರದೃಷ್ಟಿಯನ್ನೇ ಅವಲಂಬಿಸಿ ತತ್ತ್ವವಿಚಾರವನ್ನು ಮಾಡಿದರೆ ಪರಮಾತ್ಮತತ್ತ್ವಕ್ಕಿಂತ ಹೆಚ್ಚು ಅವ್ಯವಹಿತವಾಗಿರುವದು ಮತ್ತೆ ಯಾವದೂ ಇಲ್ಲವೆಂಬುದು ಸ್ಫುಟವಾಗುತ್ತದೆ. ಶ್ರುತಿಯಲ್ಲಿ ಹೇಳಿರುವದನ್ನು ಕೇಳಿರಿ : "ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ" (ಬೃ. ೩-೪-೧) ಬ್ರಹ್ಮವು ಅಥವಾ ಪರಮಾತ್ಮತತ್ತ್ವವು ಹೊರಗಿನ ವಿಷಯಗಳಂತೆ ಇಂದ್ರಿಯಾದಿಗಳ ವ್ಯವಧಾನವನ್ನು ಬಯಸಿ ಸಿದ್ಧವಾಗುವದಲ್ಲ. ಇದು ಸಾಕ್ಷಾತ್ತಾಗಿ, ನೇರಾಗಿಯೇ ನಮಗೆ ಗೊತ್ತಾಗತಕ್ಕದ್ದು ; ವಿಷಯಗಳು, ಇಂದ್ರಿಯಗಳು, ಮನಸ್ಸು, ಬುದ್ಧಿ-ಇವೆಲ್ಲಕ್ಕೂ ಹಿನ್ನೆಲೆಯಾಗಿ ಇವೆಲ್ಲಕ್ಕಿಂತಲೂ ನೇರಾಗಿ ತಿಳಿಯಬರತಕ್ಕದ್ದು. ನಾವು ಬುದ್ಧಿ, ಮನಸ್ಸು, ಇಂದ್ರಿಯ, ವಿಷಯ-ಇವೆಲ್ಲವನ್ನೂ ಅರಿಯುತ್ತಿರುವದು ಅದರ ಬೆಳಕಿನಿಂದಲೇ. ಇದು ದೊಡ್ಡದು ಎಂದು ಉಪಾಸನೆಮಾಡತಕ್ಕ ಗೌಣಬ್ರಹ್ಮನಲ್ಲ ; ಎಲ್ಲಕ್ಕೂ ವ್ಯಾಪಿಯಾಗಿ, ಎಲ್ಲವನ್ನೂ ತನ್ನೊಳಗೆ ಅಡಕಮಾಡಿಕೊಂಡಿರುವ ಚಿದಾಕಾಶವಾಗಿರುವದರಿಂದ ಮುಖ್ಯಾರ್ಥದಲ್ಲಿಯೇ ಬ್ರಹ್ಮವೆನಿಸಿಕೊಂಡಿರುವದು. ಬ್ರಹ್ಮ ಎಂದರೆ ದೇಶ, ಕಾಲ; ವಸ್ತು- ಇವುಗಳಲ್ಲಿ ಯಾವದೊಂದರ ಪರಿಚ್ಛೇದವೂ ಇಲ್ಲದ ಅನಂತವಾದ ತತ್ತ್ವವು ಎಂದರ್ಥ. ದೇಶಕಾಲವಸ್ತುಗಳೆಲ್ಲವನ್ನೂ ವ್ಯಾಪಿಸಿಕೊಂಡಿರುವ ತತ್ತ್ವವು ಏತರಿಂದ ತಾನೆ ಪರಿಚ್ಛಿನ್ನವಾದೀತು ? ಇದು ನಮ್ಮ ಆತ್ಮನೇ ಆಗಿರುತ್ತದೆ ; ನಾವು ಆತ್ಮನೆಂದು ಆಗಾಗ್ಗೆ ವ್ಯವಹರಿಸುತ್ತಿರುವ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ- ಇವೆಲ್ಲಕ್ಕೂ ಒಳಗೆ ಇರುವ ನಮ್ಮ ಸಾಕ್ಷಾತ್ಸ್ವರೂಪವಾಗಿರುವದರಿಂದ ಇದನ್ನು ಇಲ್ಲವೆಂದು ಕಲ್ಪಿಸುವದುಕೂಡ ಆಗುವಹಾಗಿಲ್ಲ.

## ನಾನು ಎಂಬುದು ಆತ್ಮನ ವ್ಯವಹಾರದ ಸೋಗು

ಹೀಗೆ ಅತ್ಯಂತಪ್ರಸಿದ್ಧವಾಗಿ, ಅತ್ಯಂತಸಮೀಪವಾಗಿ, ನಮ್ಮ ಸ್ವರೂಪವೇ ಆಗಿರುವ ಈ ಆತ್ಮನು ಎಲ್ಲವನ್ನೂ ವ್ಯಾಪಿಸಿಕೊಂಡಿರುವನಾದರೂ ವ್ಯವಹಾರದಲ್ಲಿ ನಾನು ಎಂಬ ಒಂದು ಬುರುಕಿಯನ್ನು ಹಾಕಿಕೊಂಡು ಅನಂತಸಂಖ್ಯೆಯ ನಾನುಗಳಾಗಿ ಆಡುತ್ತಿರುವನು. ವ್ಯವಹಾರದಲ್ಲಿ 'ನಾನು' ಎಂಬುದು

ಬಗೆಬಗೆಯ ಅಭಿಮಾನವನ್ನು ತಳೆಯುತ್ತ ಕುಣಿದಾಡುತ್ತಿದ್ದರೂ ಈ ಪರಮಾತ್ಮನು ತನ್ನ ನಿತ್ಯಚೈತನ್ಯರೂಪವಾದ ನೋಟದಿಂದ ಅದನ್ನು ನೋಡುತ್ತಲೇ ಇರುವನು ; ಆಳಾದವನು ತನ್ನ ಒಡೆಯನ ಮನೆಯನ್ನು 'ನನ್ನ ಮನೆ' ಎಂದು ವ್ಯವಹರಿಸುವಂತೆ ಈ ನಾನು ಎಂಬುದು ಪರಮಾತ್ಮನ ಬಲದಿಂದ ಎಲ್ಲೆಲ್ಲಿಯೂ ನಾನು, ನನ್ನದು– ಎನ್ನುತ್ತಿರುವದು. ಶರೀರದ ಒಳಗೆ ನಾನು ಎಂಬುದು ಹೇಗೆ ಎಲ್ಲಕ್ಕೂ ವ್ಯಾಪಿಯಾಗಿ ಎಲ್ಲಕ್ಕೂ ಒಳಗಿನದೆಂದು ವ್ಯವಹಾರದಲ್ಲಿ ಕಾಣುತ್ತಿರುವದೋ, ಹಾಗೆ ಈ ನಾನು ಎಂಬುದನ್ನು ಸ್ವಲ್ಪ ಅಡಗಿಸಿಕೊಂಡು ಒಳಹೊಕ್ಕು ಸಮಾಧಿಯಿಂದ, ಏಕಾಗ್ರಚಿತ್ತದಿಂದ, ನೋಡಿದರೆ ಈ ಪರಮಾತ್ಮನೇ ನಮ್ಮೆಲ್ಲರ ನಿಜವಾದ ಸ್ವರೂಪವೆಂದೂ ನಾನು ಎಂಬುದರ ನಿಜಸ್ವರೂಪವು ಚಿನ್ಮಯವೇ ಆಗಿರುವದೆಂದೂ ಅದೇ ಬ್ರಹ್ಮಾಂಡಕ್ಕೆಲ್ಲ ಆಧಾರವಾಗಿದೆಯೆಂದೂ ತಿಳಿದುಬರುವದು.

## ಪರಮಾತ್ಮನಿಷ್ಠೆಯಲ್ಲಿ ಆನಂದ

ನಾನು ಎಂಬುದರಲ್ಲಿ ನಿಂತವರಿಗೆ ಹೆಣಗಾಟ, ಕಿರಿಕಿರಿ, ಒದ್ದಾಟ– ಮುಂತಾದವು ಕಾಣಿಸುವಂತೆ ನಿಜವಾದ ಆತ್ಮನಲ್ಲಿಯೇ ನಿಂತು ನೋಡುವವರಿಗೆ ಯಾವ ಗಡಿಬಿಡಿಯೂ ಇರುವದಿಲ್ಲ. ಯಾವ ಆಯಾಸವಾಗಲಿ ಮನೋವ್ಯಥೆಯಾಗಲಿ ಇರುವದಿಲ್ಲ. ಇಂಥ ಪರಮಶಾಂತಿಯು ಬಹುಕಾಲ ಮಾಡಿದ ಪುಣ್ಯದ ಫಲವೂ ಬಹುಕಾಲ ಸತ್ಸಂಗದಿಂದ ಸಂಪಾದಿಸಿಕೊಂಡ ಆಧ್ಯಾತ್ಮಸಾಧನದ ಫಲವೂ ಆಗಿರುತ್ತದೆ. ಬಂಗಾರದ ಗಟ್ಟಿಯನ್ನು ಕೂಡಿ ಹಾಕಿದಾಗಲಲ್ಲವೆ, ಎಷ್ಟೋ ದಿನಗಳಿಂದ ಗನಿಯ ಕೆಲಸವನ್ನು ಮಾಡಿದ ಆಯಾಸವು ಸಾರ್ಥಕವೆಂದು ತೋರುವದು ? ಆದ್ದರಿಂದ ಈ ಪರಮಾರ್ಥತತ್ತ್ವವನ್ನು ಕಂಡುಕೊಳ್ಳುವದಕ್ಕೆ ಬಹಳ ಕಷ್ಟಪಟ್ಟು ಸಾಧನಮಾಡಬೇಕಾಗಿರುತ್ತದೆ ; ಆ ಬಳಿಕವೇ ನಮ್ಮ ಶ್ರಮವೆಲ್ಲ ಸಾರ್ಥಕವಾಗುವದು. ಪರಮಾರ್ಥಕ್ಕೆ ಹೋಲಿಸಿದರೆ ನಾನು ಎಂಬುದು ಹುಸಿಯಾಗಿರುತ್ತದೆ. ನಾನು ಎಂಬ ಹೆಸರಿನಿಂದಲೇ ಇದು ನಿಜವಾಗಿಯೂ ನಮ್ಮ ಸ್ವರೂಪವು ಎಂದು ಅನೇಕರು ಭ್ರಾಂತರಾಗಿರುತ್ತಾರೆ. ಅಳಿಯಪ್ಪನೆಂಬ ಹೆಸರಿನವನು ಮನೆಗೆ ಬಂದರೆ ಅತ್ತೆಯಾದವಳಿಗೆ ತನ್ನ ನಿಜವಾದ ಅಳಿಯನು ಬಂದಷ್ಟು ಸಂತೋಷ

ವಾದೀತೆ ? 'ನಾನು' ಮತ್ತು ಇದರ ಪರಿವಾರದ 'ನನ್ನದು' ಎಂಬಿವುಗಳನ್ನು ನಾವು ಎಷ್ಟುಮಟ್ಟಿಗೆ ಮಟ್ಟುಮಾಡಿಕೊಳ್ಳುವೆವೋ ಅಷ್ಟು ಮಟ್ಟಿಗೆ ನಮ್ಮ ನಿಜವಾದ ನಾನು, ಎಂದರೆ ಆತ್ಮಸ್ವರೂಪವು, ನಮಗೆ ಸಿಕ್ಕಿ ನಿಜವಾದ ಆನಂದವು ದೊರಕುವದು. ಆ ತತ್ತ್ವವೇ ಎಲ್ಲಕ್ಕೂ ಆನಂದವನ್ನುಂಟು ಮಾಡುವ ಶಕ್ತಿಯನ್ನು ಕೊಡುವದಕ್ಕೆ ಸಮರ್ಥವಾದದ್ದು.

## ಅಧ್ಯಾತ್ಮಸಾಧನಗಳು

ಸರ್ವತ್ರವೂ ವ್ಯಾಪಿಸಿರುವ ಪರಮಾತ್ಮನನ್ನು ಕಂಡುಕೊಳ್ಳುವದಕ್ಕೆ ಮೊದಲು ಆತನ ಅರ್ಚನೆ, ಸ್ತುತಿ, ಪ್ರಾರ್ಥನೆ, ಧ್ಯಾನ–ಮುಂತಾದ ಸಾಧನಗಳನ್ನು ನಡೆಯಿಸಬೇಕೆಂದು ಬಲ್ಲವರು ಉಪದೇಶಿಸಿದ್ದರು. ಈ ಸಾಧನಗಳಿಂದ ನಮಗೆ ಭಗವಂತನ ನೆನಪು ತಪ್ಪದೆ ಇರುವದಕ್ಕೆ ಸಹಾಯಕವಾಗುತ್ತಿತ್ತು. ಪರಮೇಶ್ವರನ ಸಾಂನಿಧ್ಯವನ್ನು ಸರ್ವತ್ರವೂ ಭಾವನೆಗೆ ತಂದುಕೊಳ್ಳುವದಕ್ಕಾಗಿ ದೇವಾಲಯ, ಮನೆಯಲ್ಲಿ ದೇವರಕೋಣೆ–ಮುಂತಾದವುಗಳನ್ನು ಏರ್ಪಡಿಸಿಕೊಳ್ಳುವ ಪದ್ಧತಿಯು ಹಿಂದಕ್ಕೆ ಆಚರಣೆಯಲ್ಲಿತ್ತು. ಆದರೆ ಯಾವದೋ ಕಾರಣದಿಂದ ಆ ಆಚರಣೆಯು ಸಂಕುಚಿತವಾಗುತ್ತಾ ಬಂದಿತು. ಈಗ ತೀರ್ಥಯಾತ್ರೆಯು ಹೊರರೂಪವುಮಾತ್ರ ಎಲ್ಲಿಯೋ ಕೆಲವರಲ್ಲಿ ನಿಂತಿದೆ. ದೇವರ ಗುಡಿಯನ್ನು ಪ್ರವೇಶಮಾಡುವ ಅಭ್ಯಾಸವು ತಪ್ಪಿತು; ದೇವರಕೋಣೆಯೆಂದು ಮನೆಯ ಒಂದು ಭಾಗವನ್ನು ಇಡುವದು ವ್ಯರ್ಥವೆಂಬ ಭಾವನೆ ಬಂದಿತು. ಕೊನೆಗೆ ದೇವರ ಗೂಡೂ ತಪ್ಪಿ, ಸಾಲಗ್ರಾಮದ ಸಂಪುಟದಮೇಲೆ ತುಳಸೀದಳವನ್ನಿಟ್ಟರಾಯಿತು ಎಂದಾಗಿ, ಕೊನೆಗೆ ಸಾಲಗ್ರಾಮದ ಪೂಜೆಗೆ ಬೇಕಾದ ಮಡಿಮೈಲಿಗೆಗಳ ಪಾಲನೆಯು ಸಾಧ್ಯವಿಲ್ಲವೆಂದು ಒಬ್ಬ ಬ್ರಾಹ್ಮಣನಿಗೆ ಅದನ್ನು ದಾನಮಾಡಿಬಿಡುವದೋ ಮಠಾದಿಗಳಲ್ಲಿ ಅದನ್ನು ಇಟ್ಟುಬಿಡುವದೋ ಪ್ರಾರಂಭವಾಯಿತು ! ನಮ್ಮ ಸಕಲವ್ಯವಹಾರಕ್ಕೂ ಆಧಾರನಾದ ಪರಮಾತ್ಮನೊಬ್ಬನು ಇದ್ದಾನೆಂಬುದಕ್ಕೆ ಪ್ರಮಾಣವೇನು ?–ಎಂದು ಕೇಳುವ ಧಾರ್ಷ್ಟ್ಯವೂ ಮುಂದಕ್ಕೆ ಬಂದಿತು. ಶ್ರುತಿಯಲ್ಲಿ ಹೇಳಿರುವದೇನು ? **'ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ ॥'** (ತೈ. ೨–೬) ಪರಮಾತ್ಮನು ನಮ್ಮ ಆತ್ಮನೇ ಆಗಿರುತ್ತಾನೆ. ಅವನು ಇಲ್ಲ ಎಂದೆಣಿಸು

ವವನು ತಾನೇ ಇಲ್ಲದವನಾಗುವನು. ಈ ಗಡಿಯಾರವು 'ದೀಪವೊಂದು ಇಲ್ಲಿದೆ ಎಂಬುದಕ್ಕೆ ಪ್ರಮಾಣವೇನು ?' ಎಂದು ಕೇಳಿದರೆ ಸರಿಯಾಗುವದೆ ? 'ಗಡಿಯಾರವಿದೆ' ಎಂದು ತಿಳಿಸಿಕೊಡುವದೇ ದೀಪದ ಬೆಳಕು. ದೀಪದ ಬೆಳಕಿಗೆ ಮತ್ತೆ ಬೇರೊಂದು ಪ್ರಮಾಣವೇತಕ್ಕೆ ಬೇಕು ? ಬ್ರಹ್ಮವೇ ಪ್ರಮಾಣಗಳಿಗೆಲ್ಲ ಬೆಳಕನ್ನು ಒದಗಿಸಿಕೊಟ್ಟಿರುವ ಮೂಲಬೆಳಕು. ಅದನ್ನು ವೇದವುಕೂಡ ತಿಳಿಸಿಕೊಡಲಾರದು. ಆದರೂ ಈ ನನ್ನ ಕೈ ಬೆರಳಿನಿಂದ ಆ ದೂರದಲ್ಲಿರುವ ದೀಪವನ್ನು ನಾನು ತೋರಿಸಿದರೆ ನೀವೆಲ್ಲರೂ ಆ ದಿಕ್ಕಿನಲ್ಲಿ ನೋಡಿ ಅದನ್ನು ತಿಳಿಯುವಂತೆ ಮಾಡಬಹುದಲ್ಲವೆ ? ಹಾಗೆ ವೇದವೂ ನಮ್ಮನ್ನು ಆ ಪರಮಾತ್ಮನ ಕಡೆಗೆ ತಿರುಗುವಂತೆ ಮಾಡಬಲ್ಲದು. ಆಗ ಸ್ವಯಂಪ್ರಸಿದ್ಧನಾದ ನಿತ್ಯಪ್ರಕಾಶನಾದ ಆತನು ತಾನೇ ನಮಗೆ ತೋರಿಕೊಳ್ಳುತ್ತಾನೆ. ನಮ್ಮ ಶರೀರಾದಿಗಳಿಗೆ ಅವುಗಳ ವ್ಯಾಪಾರಗಳು ಏತರಿಂದ ಉಂಟಾಗಿರುವವು ? ಭೂಮಿಯಲ್ಲಿ ಹುಟ್ಟುವ ಮರಗಿಡಗಳಲ್ಲಿ ರೂಪರಸಗಂಧಗಳುಳ್ಳ ಚಿಗುರು, ಎಲೆ, ಹೂಹಣ್ಣುಗಳು–ಇವೆಲ್ಲ ಏತರಿಂದ ಉಂಟಾಗುವವು ? ಅವನ್ನು ಕಂಡರೆ ನಮಗೆ ಆಗುತ್ತಿರುವ ಹರ್ಷಕ್ಕೆ ಬುಡವು ಯಾವದು? ಇದನ್ನು ನಾವು ಚಿಂತಿಸಿದರೆ, ಪರಮಾತ್ಮನ ಅಸ್ತಿತ್ವದ ಅರಿವಾಗುತ್ತದೆ, ಆತನ ವಿಭೂತಿಯ ಧ್ಯಾನವೂ ದಕ್ಕುತ್ತದೆ.

ಪರಮಾತ್ಮನು ಆನಂದದ ಬುಗ್ಗೆಯಾಗಿರುತ್ತಾನೆ. ಅವನ ಹೆಸರನ್ನು ಕೇಳಿದರೂ ಭಾವನಾಪರರಾದವರ ಮನಸ್ಸು ಅದರಲ್ಲಿಯೇ ರಮಣಮಾಡ ಹತ್ತುವದು. ಆದ್ದರಿಂದಲೇ ಅವನಿಗೆ 'ರಾಮ' ಎಂದು ಹೆಸರು. ರಾಮ, ರಾಮ, ರಾಮ, ರಾಮ !– ಎಂದು ಭಾವನಾಪೂರಿತರಾಗಿ ಲಕ್ಷ್ಯವಿಟ್ಟು ನಾಮವನ್ನು ಕೀರ್ತನೆಮಾಡಿದರೆ ಆನಂದವು ಉಕ್ಕುವದು. ಪರಮಾತ್ಮನ ನಾಮಸ್ಮರಣೆಯಿಂದ ಶುದ್ಧನಾಗಿ ನೋಡಿದವನಿಗೆ ಆತನ ನಾಮವೂ ಅವನೇ ಎಂಬ ಭಾವನೆಯುಂಟಾಗುವದು.

ಸ್ನಾತಂ ತೇನ ಸಮಸ್ತತೀರ್ಥಸಲಿಲೇ ಸರ್ವಾಪಿ ದತ್ತಾವನಿ–<br>
ರ್ಯಜ್ಞಾನಾಂ ಚ ಸಹಸ್ರಮಿಷ್ಟಮಖಿಲಾ ದೇವಾಶ್ಚ ಸಂಪೂಜಿತಾಃ ।<br>
ಸಂಸಾರಾಚ್ಚ ಸಮುದ್ಧೃತಾಃ ಸ್ವಪಿತರಸ್ತ್ರೈಲೋಕ್ಯಪೂಜ್ಯೋಽಪ್ಯಸೌ<br>
ಯಸ್ಯ ಬ್ರಹ್ಮವಿಚಾರಣೇ ಕ್ಷಣಮಪಿ ಸ್ಥೈರ್ಯಂ ಮನಃ ಪ್ರಾಪ್ನುಯಾತ್ ॥

ಯಾವನ ಮನಸ್ಸು ಬ್ರಹ್ಮವಿಚಾರದಲ್ಲಿ ಕ್ಷಣಮಾತ್ರವಾದರೂ ಸ್ಥಿರವಾಗಿ ನಿಂತಿರುವದೋ ಅವನು ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡಿದಂತೆ ;

ಇಡಿಯ ಭೂಮಿಯನ್ನೇ ದಾನಮಾಡಿದಂತೆ ; ಸಾವಿರಾರು ಯಜ್ಞಗಳನ್ನು ಮಾಡಿದಂತೆ ; ಎಲ್ಲಾ ದೇವತೆಗಳನ್ನೂ ಸಂಪೂಜನಮಾಡಿದಂತೆ ; ತನ್ನ ಪಿತೃಗಳನ್ನು ಸಂಸಾರದಿಂದಲೇ ಉದ್ಧಾರಮಾಡಿದಂತೆ ; ಅವನು ಮೂರು ಲೋಕಕ್ಕೂ ಪೂಜ್ಯನು– ಎಂದು ಬಲ್ಲವರು ಹೇಳುವರು. ಇನ್ನು ಪರಮಾತ್ಮ ನಲ್ಲಿಯೇ ಧ್ಯಾನದಿಂದ ಚಿತ್ತಲಯವನ್ನು ಹೊಂದಿದವನನ್ನು ಬರಿಯ ಪುಣ್ಯ ವಂತನೆನ್ನಬಹುದೆ ? ಅವನು ಸಾಕ್ಷಾತ್ಪರಬ್ರಹ್ಮಸ್ವರೂಪನೇ ಆಗಿರುತ್ತಾನೆ.

## ಬ್ರಹ್ಮಾನಂದವನ್ನು ಅನುಭವಿಸುವದಕ್ಕೆ ಎಲ್ಲರಿಗೂ ಸಮಾನವಾದ ಹಕ್ಕು

ಈ ಶರೀರವೆಂಬ ಕೋಟೆಯ ನಡುವೆ ಹೃದಯವೆಂಬ ಬ್ರಹ್ಮವೇಶ್ಮವು, ಪರಮಾತ್ಮನ ಅರಮನೆಯು ಇರುತ್ತದೆ. ನಮ್ಮ ಇಂದ್ರಿಯಗಳು ತಮ್ಮ ತಮ್ಮ ವ್ಯಾಪಾರವನ್ನು ಮಾಡುತ್ತಿರುವದು ತಮತಮಗಾಗಿಯಲ್ಲ ; ಆ ಇಂದ್ರಿಯಗಳು ತಂದುಕೊಟ್ಟ ಕಾಣಿಕೆಯನ್ನು ಮನೋಬುದ್ಧಿಗಳು ಆ ಪರ ಮಾತ್ಮನಿಗೇ ಒಪ್ಪಿಸುತ್ತಿರುತ್ತವೆ. ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡಿ ಅದರೊಳಗೇ ಹೊಕ್ಕು ಪ್ರತಿಯೊಬ್ಬ ಜೀವನಲ್ಲಿಯೂ ನಾನು, ನಾನು–ಎಂಬ ಪ್ರತ್ಯಯದಲ್ಲಿ ಹೊಳೆಯುತ್ತಾ ಅದರ ಹಿಂಬದಿಯಲ್ಲಿ ಸರ್ವವನ್ನೂ ಬೆಳಗುತ್ತಾ ಇರುತ್ತಾನೆ ಎಂದು ಶ್ರುತಿಗಳು ಸಾರುತ್ತಿವೆ. ಯಾರು ತಮ್ಮೊಳಗೆ ಈ ಆನಂದ ಪುರುಷನನ್ನು ತಮ್ಮ ಆತ್ಮನೆಂದು ಕಂಡುಕೊಳ್ಳುವರೋ ಅವರಿಗೆ ಸರ್ವದಿಕ್ಕು ಗಳೂ ಸುಖಮಯವಾಗಿರುವವು, ಪ್ರಪಂಚವೇ ಆನಂದದ ಸಾಗರವಾಗಿ ಕಾಣ ಹತ್ತುವದು. ಪರದೇಶದವರು ಈ ದೇಶದಿಂದ ಎಷ್ಟೋ ಸಂಪತ್ತನ್ನು ದೋಚಿ ಕೊಂಡು ಹೋಗಿರುವರೆಂದು ಇತಿಹಾಸವು ಹೇಳುತ್ತಿದೆ. ಆದರೆ ಆನಂದರೂಪ ನಾದ ಈ ನಮ್ಮ ಆತ್ಮನನ್ನು ಯಾರೂ ಎಂದಿಗೂ ಕಸಿದುಕೊಳ್ಳಲಾರರು. ಬ್ರಹ್ಮಾನಂದವನ್ನು ಅನುಭವಿಸುವ ನೈಸರ್ಗಿಕವಾದ ಹಕ್ಕು ನಮ್ಮೆಲ್ಲರಿಗೂ ಸಮಾನವಾಗಿರುತ್ತದೆ. ಈ ಆತ್ಮನು ನಮ್ಮಲ್ಲಿ ಮಾತ್ರವೇ ಅಲ್ಲ, ಸಕಲ ಭೂತಗಳಲ್ಲಿಯೂ ಸಮಾನವಾಗಿಯೇ ಇದ್ದುಕೊಂಡಿರುತ್ತಾನೆ ; ಅವನ ಆನಂದವು ಅರಿತುಕೊಳ್ಳುವ ಎಲ್ಲಾ ಜೀವರುಗಳಿಗೂ ಸಮವಾಗಿಯೇ ದೊರೆಯುತ್ತದೆ. ಈ ಆನಂದವನ್ನು ಅನುಭವಿಸುವ ಹಕ್ಕು ನಮ್ಮೆಲ್ಲರಿಗೂ

ಸಮವಾಗಿರುವದರಿಂದಲೇ ಶ್ರುತಿಯು 'ನೀವೆಲ್ಲರೂ ಅಮೃತದ ಮಕ್ಕಳು, ಮರ್ತ್ಯರಲ್ಲ' ಎನ್ನುತ್ತಿದೆ. ವೇದಕಾಲದ ಮಹರ್ಷಿಗಳು ಈ ಆನಂದವನ್ನು ತಾವೂ ಕಂಡುಕೊಂಡು ನಮಗೂ ಇದನ್ನು ಅನುಭವಿಸುವದಕ್ಕೆ ಅವಕಾಶವಿದೆ ಎಂಬ ಶುಭಸಂದೇಶವನ್ನು ಕೊಟ್ಟಿರುತ್ತಾರೆ. 'ಸತ್ಯಜ್ಞಾನಾನಂದರೂಪವಾದ ಅನಂತಬ್ರಹ್ಮವು ನಮ್ಮಗಳ ಹೃದಯಗುಹೆಯಲ್ಲಿಯೇ ಇದೆ ಎಂದು ಯಾವನು ಅರಿತುಕೊಳ್ಳುವನೋ ಅವನು ಸರ್ವಕಾಮಗಳನ್ನೂ ಒಮ್ಮೆಗೇ ಅನುಭವಿಸುತ್ತಾನೆ' ಎಂಬುದು ಅವರ ವಾಕ್ಯ. ಹೃದಯದಲ್ಲಿ ಪರಮಾತ್ಮನಿರುವನೆ ? ಎಷ್ಟೋ ಜನರು ಹೃದಯಕ್ರಿಯೆ ನಿಂತು ಸತ್ತಿರುವರಲ್ಲ !– ಎಂದು ಶಂಕಿಸುವವರೂ ಕೆಲವರುಂಟು. ಆದರೆ ಅವರಿಗೆ ಹೃದಯವೆಂದರೇನೆಂಬುದು ತಿಳಿಯದು. ಅವರು ಹೊರಗಿನಿಂದ ನೋಡಿ ಮಾಂಸಮಯವಾದ ಹೃದಯವನ್ನು ಕಂಡುಕೊಂಡವರೇ ಹೊರತು ಒಳಗಿನಿಂದ ನೋಡಿ ಪರಮಾತ್ಮನಿರುವ ಹೃದಯವನ್ನು ಕಂಡುಕೊಂಡವರಲ್ಲ.

ಈ ಲೋಕದಲ್ಲಿ ಒಂದು ವಸ್ತುವನ್ನೇ ಎರಡು ಬೇರೆಬೇರೆಯ ದೃಷ್ಟಿಗಳಿಂದ ನೋಡುವದಕ್ಕಾಗುತ್ತದೆ ಎಂದು ಆಗಲೆ ಹೇಳಿರುತ್ತೇನೆ. ಇವುಗಳಲ್ಲಿ ನಾನು ಎಂಬುದನ್ನು ಪ್ರಧಾನವಾಗಿ ಮಾಡಿಕೊಂಡು ನೋಡುವದು ದುಃಖಮೂಲವಾದ ದೃಷ್ಟಿಯು. ಆದರೆ ಈ ನಾನು ಎಂಬುದನ್ನು ವಿಚಾರಿ ಒಳಹೊಕ್ಕು ಒಳಗಿರುವ ಪರಮಾತ್ಮನಲ್ಲಿ ನಿಂತು ನೋಡುವದು ಎರಡನೆಯ ದೃಷ್ಟಿಯು. ಈ ದೃಷ್ಟಿಯು ಈಗಿನ ನಾಗರಿಕತೆಯಲ್ಲಿ ನಮಗೆ ಕಾಣುತ್ತಿರುವ ಬಗೆಬಗೆಯ ದುಃಖಗಳನ್ನು ಪರಿಹರಿಸಿ ಎಲ್ಲವನ್ನೂ ಆನಂದಮಯವಾಗಿ ಮಾಡಿಕೊಡಬಲ್ಲದು. ನಾವೆಲ್ಲರೂ ಈ ದೃಷ್ಟಿಯನ್ನು ಅಳವಡಿಸಿಕೊಂಡು ಆನಂದದಿಂದಿರಬಹುದಾಗಿದೆ.

# ೩. ಸರ್ವವೂ ಬ್ರಹ್ಮಮಯ

## (18-2-54)

## ಹಿಂದೆ ಹೇಳಿರುವದರ ಸಾರ

ಪ್ರಪಂಚವನ್ನು ನೋಡುವದಕ್ಕೆ ಎರಡು ಬೇರೆಬೇರೆಯ ದೃಷ್ಟಿಗಳಿರುವವೆಂಬುವನ್ನೂ ಆ ದೃಷ್ಟಿಗಳಿಂದ ನಮ್ಮ ಜೀವನದಲ್ಲಾಗುವ ಫಲಭೇದವನ್ನೂ ಎರಡು ದಿನಗಳಿಂದಲೂ ವಿವರಿಸುತ್ತಾಬಂದಿದ್ದೇನೆ. ನಾನು ಎಂಬ ತಪ್ಪುಕೇಂದ್ರವನ್ನು ಇಟ್ಟುಕೊಂಡು ಪ್ರಪಂಚವೃತ್ತವನ್ನು ನೋಡುವದು ಒಂದು ದೃಷ್ಟಿ. ನಾನು ನನ್ನ ಸ್ವಂತ ಪ್ರಯತ್ನದಿಂದ ಇಂಥಿಂಥ ಕೆಲಸವನ್ನು ಮಾಡಿದರೆ ಇಂಥಿಂಥ ಫಲವನ್ನು ಪಡೆಯಬಹುದು ಎಂಬುದು ಈ ದೃಷ್ಟಿಯ ದೃಢ ವಿಶ್ವಾಸವು. ಎಷ್ಟು ಕೆಲಸವನ್ನು ಮಾಡಿದರೆ ಅಷ್ಟರಮಟ್ಟಿಗೆ ಫಲವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಕೆಲಸದ ವೇಗವನ್ನೂ ಪ್ರಮಾಣವನ್ನೂ ನಾವು ಹೆಚ್ಚಿಸುತ್ತಾಹೋಗುತ್ತೇವೆ. ಆದರೆ ಇದೇ ನಂಬಿಕೆಯು ನಮ್ಮ ಸುತ್ತಲೂ ಇರುವವರಿಗೆಲ್ಲ ಇರುವದರಿಂದ ನಮ್ಮನಮ್ಮಲ್ಲಿ ಪೈಪೋಟಿಯುಂಟಾಗುವದು. ಆಗ ಕೆಲಸಗಾರರಿಗೆಲ್ಲ ಚಿತ್ತದಲ್ಲಿ ರಾಗದ್ವೇಷಗಳು ಎದ್ದುಕೊಳ್ಳುವವು; ತಮಗೆ ಅನುಕೂಲರಾಗಿರುವವರೆಲ್ಲರೂ ಮಿತ್ರರೆಂದೂ ಅಡ್ಡಿಯಾಗಿರುವವರೆಲ್ಲರೂ ಶತ್ರುಗಳೆಂದೂ ಎಣಿಸಿ ಮಿತ್ರರನ್ನು ತಮ್ಮಕಡೆಗೆ ಸಂಗ್ರಹಿಸುವದೂ ಶತ್ರುಗಳನ್ನು ಸಾಮದಾನಭೇದದಂಡಗಳಿಂದ ಹಿಂದಕ್ಕೆ ತಳ್ಳಿ ಉಪಾಯದಿಂದ ತಮ್ಮ ಕೆಲಸವನ್ನು ಸಾಗಿಸಿಕೊಂಡು ಅವರನ್ನು ಮೋಸಪಡಿಸುವದೂ ಅನಿವಾರ್ಯವಾಗುವದು.

ಈ ವ್ಯವಹಾರವು ಅನಿತ್ಯವೂ ಅಸುಖವೂ ಆಗಿರುವ ಪ್ರಪಂಚವನ್ನೇ ನಮಗೆ ತೋರಿಸುತ್ತಿರುವದು. ಪ್ರಕೃತಿನಿಯಮಗಳು ಒಂದಾನೊಂದು ಕ್ರಮದಿಂದ ನಡೆಯುವವು ಎಂದು ನಮ್ಮ ಭಾವನೆ. ಅದೇನೋ ನಿಜವಾದರೂ ನಮಗೆ ತಿಳಿದಷ್ಟು ಉದಾಹರಣೆಗಳಿಂದಲೇ ನಮಗೆ ತೋಚಿದಂತೆ ನಾವು ಸಾಮಾನ್ಯನಿಯಮಗಳನ್ನು ಏರ್ಪಡಿಸಿಕೊಳ್ಳುವದರಿಂದ ನಮ್ಮ ಶ್ರಮವು ಸ್ವಲ್ಪದೂರದವರೆಗೆ ಫಲಕಾರಿಯಾಗಿ ಕಂಡರೂ ಕೊನೆಗೆ ದುಃಖದಲ್ಲಿಯೇ

ಪರ್ಯವಸಾನವಾಗುವದು. ನಮಗೆ ದೊರೆತ ಫಲಗಳು ಅನಿತ್ಯವಾಗಿಯೂ ಕೆಲವು ವೇಳೆಗಳಲ್ಲಿ ನಿರೀಕ್ಷಣೆಗೆ ವಿರುದ್ಧವಾಗಿಯೂ ಆಗುವವು. ಆದ್ದರಿಂದಲೇ ಈ ಪ್ರಕೃತಿಯನ್ನು 'ಅಘಟಿತಘಟನಾಪಟೀಯಸೀ ಮಾಯಾ' ಎಂದು ಬಲ್ಲವರು ಕರೆದಿರುತ್ತಾರೆ. ಹಿಟ್ಲರನು ಯೂರೋಪುಖಂಡದ ಮುಕ್ಕಾಲುಭಾಗವನ್ನು ಗೆದ್ದನೆಂಬ ಪ್ರಖ್ಯಾತಿಯನ್ನು ಪಡೆದನು ; ಕೊನೆಗೆ ರಷ್ಯನರಮೇಲೆ ಅವನು ಬೀಳುವಹೊತ್ತಿಗೆ ಮಾಯೆಯು ಅವನ ಪ್ರಯತ್ನಗಳನ್ನು ನಿಷ್ಫಲಗೊಳಿಸಿತು. ಲೋಕದಲ್ಲಿ ಅನೇಕರು ಮಾಡುವ ಪ್ರಯತ್ನವು ಬರಿಯ ಶ್ರಮಮಾತ್ರದಲ್ಲಿಯೇ ಪರ್ಯವಸಾನವಾಗುತ್ತಿರುವದು. ಇದನ್ನು 'ಕ್ಯಾತಯ್ಯನ ಬಿಟ್ಟಿ' ಎಂಬ ಕಲ್ಪಿತಕಥೆಯಿಂದ ವಿಶದೀಕರಿಸುವದುಂಟು. ಒಬ್ಬ ನೇಯ್ಗೆಯವನು ತಾನು ಮಾಡುತ್ತಿರುವ ಶ್ರಮಕ್ಕೆ ತಕ್ಕಷ್ಟು ಫಲವು ದೊರಕುತ್ತಿಲ್ಲವೆಂಬ ಭಾವನೆಯಿಂದ ಪರದೇಶಕ್ಕಾದರೂ ಹೋಗಿ ಹಣವನ್ನು ಸಂಪಾದಿಸಿಕೊಂಡು ಬರಬೇಕೆಂದು ಸಂಕಲ್ಪಿಸಿದನು. ಅವನು ಸಂಜೆಯಹೊತ್ತಿಗೆ ಬಯಲುಕಡೆಗೆ ಹೋದಾಗಲೆಲ್ಲ ಒಂದು ಮೋಟುಗೋಡೆಯ ಕಡೆಯಿಂದ 'ಕ್ಯಾತಯ್ಯನ ಬಿಟ್ಟಿ ಮಾಡುವೆಯ ?' ಎಂದು ಮತ್ತೆಮತ್ತೆ ಯಾರೋ ಕೇಳಿದಹಾಗಾಗುತ್ತಿತ್ತು. ಒಂದು ದಿನ ಅವನು ಕುತೂಹಲದಿಂದ 'ಆಗಲಿ, ಮಾಡುವೆನು !' ಎಂದನು. ಕೂಡಲೇ ಹಣತುಂಬಿದ ಕೊಡವು ಝುಣ್‌ಝುಣ್ ಎಂದು ಮುಂದಕ್ಕುರುಳಿ ಬಂದಿತು. ಅವನು ಆಶ್ಚರ್ಯದಿಂದ ಒಳಗೆ ನೋಡಿ ಅದರಲ್ಲಿರುವ ಹಣವನ್ನು ಯಾರಾದರೂ ಕಸಿದುಕೊಂಡಾರೆಂಬ ಭೀತಿಯಿಂದ ಅದನ್ನು ಹೆಗಲಮೇಲೆ ಇಟ್ಟುಕೊಂಡು ಊರನ್ನು ಬಿಟ್ಟು ಅಡ್ಡದಾರಿಹಿಡಿದು ತೆಗ್ಗುತಿಟ್ಟು, ಹಳ್ಳಕೊಳ್ಳ, ಕಾಡುಮೇಡು– ಏನನ್ನೂ ಲೆಕ್ಕಿಸದೆ ಬಹುದೂರ ನಡೆದು ಕೊನೆಗೆ ಒಂದೂರಿಗೆ ಬಂದು ತಲುಪಿದನು. ಆವೂರಲ್ಲಿ ಇವನಿಗೆ ಯಾರೊಬ್ಬರೂ ತಂಗುವದಕ್ಕೆ ಸ್ಥಲವನ್ನು ಕೊಡಲಿಲ್ಲ ; ಕೊನೆಗೆ ಒಬ್ಬರ ಮನೆಯ ಕೊಟ್ಟಿಗೆಯಲ್ಲಿ ಒಂದಿಷ್ಟು ಇಂಬು ದೊರೆಯಿತು. ದಾರಿನಡೆದ ಶ್ರಮದಿಂದ ಇವನು ನಿದ್ರೆಹೋಗಿರಲು ಮನೆಯ ಯಜಮಾನನು ಇವನಿದ್ದಲ್ಲಿಗೆ ಬಂದು ಆ ಕೊಡವನ್ನು ಅಪಹರಿಸಿದನು. ಬೆಳಿಗ್ಗೆ ಇವನು ಎಷ್ಟು ಅತ್ತುಕರೆದರೂ ಇವನಿಗೆ ಹಣದ ಕೊಡವು ದೊರೆಯಲಿಲ್ಲ. ಕೊನೆಗೆ 'ಇದಿರಲಿ, ನಿನ್ನ ಹೆಸರೇನಪ್ಪ ?' ಎಂದು ಕೇಳಿದನು. ಅವನ ಹೆಸರು 'ಕ್ಯಾತಯ್ಯ'ನೆಂದು ತಿಳಿದು ಕೂಡಲೆ

'ಸರಿ, ನನ್ನ ಹಣೆಯಲ್ಲಿ ಬರೆದದ್ದೇ ಆಯಿತು' ಎಂದುಕೊಂಡು ಎರಡು ಕೈಗಳನ್ನೂ ಬೀಸಿಕೊಂಡು ಊರಿಗೆ ಹಿಂತಿರುಗಿದನಂತೆ! ಈ ಪ್ರಪಂಚದ ನಮ್ಮ ವ್ಯವಹಾರವೂ ಬಹಳಮಟ್ಟಿಗೆ ಹೀಗೆ ಕ್ಯಾತಯ್ಯನ ಬಿಟ್ಟಿಯೇ ಆಗಿರುತ್ತದೆ. ಏಕೆಂದರೆ ನಮ್ಮಲ್ಲನೇಕರು ಶ್ರಮಪಟ್ಟು ಕೆಲಸಮಾಡಿಮಾಡಿ, ಕೆಲಸಕ್ಕೆ ತಕ್ಕ ಫಲ ದೊರೆಯಲಿಲ್ಲವಲ್ಲ !– ಎಂದು ನಿಟ್ಟುಸಿರು ಬಿಡುತ್ತಿರುವೆವು. ಆದರೂ ಆಸೆಯು ನಮ್ಮನ್ನು ಗೋಳುಗುಟ್ಟಿಸುವದು ತಪ್ಪುವದಿಲ್ಲ. ನಮ್ಮ ಶ್ರಮಕ್ಕೆ ಯಾರೋ ಮತ್ತೊಬ್ಬರಿಗೆ ಫಲವಾಗುವದೂ ಉಂಟು. ಈಗ ಫಲವಾಗುವದು, ಆಗ ಫಲವಾಗುವದು, ಇನ್ನೊಂದು ಸ್ವಲ್ಪ ಪ್ರಯತ್ನಿಸಿದರೆ ಅವಶ್ಯವಾಗಿ ಫಲವು ಸಿಕ್ಕುವದು !–ಎಂಬ ಆಸೆಯು ನಮ್ಮನ್ನು ಮುಂದುವರಿಯುವಂತೆ ಮಾಡುತ್ತಲೇ ಇದೆ. ಗ್ರೀಕರ ಪುರಾಣವಲ್ಲಿ ಒಂದು ಕಥೆಯಿದೆ. ಟಾಂಟಲಸ್ ಎಂಬಾತನನ್ನು ಒಂದು ದ್ರಾಕ್ಷಾರಸದ ಸಮುದ್ರದಲ್ಲಿ ಮುಳುಗಿಸಿಬಿಟ್ಟಿದ್ದರಂತೆ. ಅವನ ಸುತ್ತಲೂ ದ್ರಾಕ್ಷಾರಸವೇ ಇದ್ದಿತು. ಆದರೆ ಅದನ್ನು ಕುಡಿಯುವದಕ್ಕೆ ಹೋದರೆ ಮಾತ್ರ ಆ ರಸವು ಅವನಿಗೆ ಎಟುಕದೆ ಒಂದಿಷ್ಟು ಮುಂದಕ್ಕೆ ಹೋಗುತ್ತಿತ್ತು. ಇದರಂತೆ ಅವನ ತಲೆಯಮೇಲೆ ಸ್ವಲ್ಪ ಕೈಚಾಚಿದರೆ ನಿಲುಕುವಷ್ಟು ಎತ್ತರದಲ್ಲಿ ದ್ರಾಕ್ಷಿಯ ಗೊಂಚಲುಗಳು ಜೋತುಬಿದ್ದಿದ್ದವು ; ಆದರೆ ಅವನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನಿಸಿದರೆ ಮಾತ್ರ ಆ ಹಣ್ಣುಗಳು ಮತ್ತೆರಡು ಗೇಣಿನಷ್ಟು ಎತ್ತರದಲ್ಲಿರುವಂತೆ ಕಾಣುತ್ತಿದ್ದವಂತೆ ! ಆ ಟಾಂಟಲಸ್ಸನ ನರಕವೇ ನಮ್ಮ ವ್ಯವಹಾರವೆನ್ನಬಹುದು. ಇಲ್ಲಿ ಎಲ್ಲೆಲ್ಲಿಯೂ ಆಶೆಗೊಳಿಸುವ ಪದಾರ್ಥಗಳೇ ನಮ್ಮನ್ನು ಸುತ್ತುವರಿದುಕೊಂಡಿರುತ್ತವೆ ; ಆದರೆ ಅವನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಿದರೆ ಅವು ಇನ್ನಷ್ಟು ದೂರ ಸರಿಯುವವು ; ಮತ್ತೆ ನಮ್ಮನ್ನು ಪ್ರಲೋಭನ ಮಾಡುವದನ್ನು ಬಿಡುವದೂ ಇಲ್ಲ !

ಇಲ್ಲಿಯವರೆಗೆ ವರ್ಣಿಸಿದ್ದ ನಾನು ಎಂಬ ಕೇಂದ್ರದಿಂದ ಪ್ರಪಂಚವನ್ನು ನಿರೀಕ್ಷಿಸುವ ವ್ಯವಹಾರಗಳಿಂದಾಗುವ ಅನರ್ಥಗಳನ್ನು. ನಾನು ಎಂಬುದನ್ನು ಪ್ರಧಾನವಾಗಿ ಮಾಡಿಕೊಂಡ ದೃಷ್ಟಿಯು ಅನಿತ್ಯವೂ ಅಸುಖವೂ ಆಗಿರುವ ಪ್ರಪಂಚವನ್ನೇ ನಮ್ಮ ಮುಂದೆ ಇಡುತ್ತದೆ. ಆದರೆ ಮತ್ತೊಂದು ದೃಷ್ಟಿಯುಂಟು. ಅದು ಬ್ರಹ್ಮ, ಪರಮಾತ್ಮ, ಭಗವಂತ, ಈಶ್ವರ– ಎಂಬ ಹೆಸರು

ಗಳಿಂದ ಪ್ರಖ್ಯಾತವಾಗಿರುವ ತತ್ತ್ವವನ್ನು ಕೇಂದ್ರವಾಗಿಟ್ಟುಕೊಳ್ಳುವ ದೃಷ್ಟಿ. ಈ ದೃಷ್ಟಿಯನ್ನು ಅಸಡ್ಡೆ ಮಾಡಿದ್ದರಿಂದಲೇ ನಮಗೆ ದುಃಖವು ತೋರುತ್ತಿದೆ. 'ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್' ಈ ಅನಿತ್ಯವೂ ಅಸುಖವೂ ಆದ ಲೋಕವನ್ನು ಪಡೆದಿರುತ್ತೀಯಷ್ಟೆ ; ಇಲ್ಲಿ ನಿನಗೆ ಸುಖವು ಬೇಕಾದರೆ ನನ್ನನ್ನು ಭಜಿಸು!—ಎಂದು ಭಗವಂತನು ಅರ್ಜುನನನ್ನು ನಿಮಿತ್ತಮಾಡಿಕೊಂಡು ನಮಗೆಲ್ಲರಿಗೂ ಬೋಧಿಸಿರುತ್ತಾನೆ. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ—ಎಂಬ ಮಹಾಭೂತಗಳು ತಮ್ಮತಮ್ಮ ವ್ಯಾಪಾರವನ್ನು ಚಿತ್ರವಿಚಿತ್ರರೀತಿಯಿಂದ ಮಾಡುತ್ತಿರುವ ಶಕ್ತಿಯು ಆ ಪರಮಾತ್ಮನಿಂದಲೇ ಬಂದಿರುತ್ತದೆ. ಭೂಮಿಯಲ್ಲಿ ಬಗೆಬಗೆಯ ಗಿಡಮರಬಳ್ಳಿಗಳು ಉಂಟಾಗುವದು ಪರಮಾತ್ಮನ ಮಹಿಮೆಯಿಂದ ; ಬೀಜವು ಮೊಳಕೆಯಾಗುವ ಶಕ್ತಿ, ಮೊಳಕೆಯು ಚಿಗುರಿ ಗಿಡವಾಗಿ ಬಗೆಬಗೆಯ ರೂಪರಸಗಂಧಗಳ ಹೂಹಣ್ಣುಗಳನ್ನು ಬಿಡುವ ಶಕ್ತಿ—ಇವೆಲ್ಲವೂ ಆತನ ಮಹಿಮೆಯಿಂದಲೇ. ಭೂಮಿಯಮೇಲೆ ಬಗೆಬಗೆಯ ಪಶುಪಕ್ಷಿಮೃಗಾದಿಗಳೂ ಕ್ರಿಮಿಕೀಟಗಳೂ ತೋರಿಕೊಂಡು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಿರುವದೂ ಆತನ ಮಹಿಮೆಯಿಂದಲೇ. ಮನುಷ್ಯರಾದ ನಾವು ಹುಟ್ಟಿಬೆಳೆದು ಬಗೆಬಗೆಯ ವ್ಯವಹಾರಗಳನ್ನು ಕೈಗೊಂಡಿರುವದೂ ನಮ್ಮ ಕಾರ್ಯಗಳಿಗೆ ವಿವಿಧವಾದ ಫಲವಾಗುತ್ತಿರುವದೂ ಆತನ ಅನುಗ್ರಹದಿಂದಲೇ. ಹೀಗೆಯೇ ಅಪ್ಪು, ತೇಜಸ್ಸು— ಮುಂತಾದವುಗಳ ಅದ್ಭುತವ್ಯಾಪಾರಗಳೂ ಅವುಗಳ ಕಾರ್ಯಗಳೂ ಆತನ ಅನುಗ್ರಹದಿಂದಲೇ ಆಗುತ್ತಿರುವವು. ಪ್ರಕೃತಿಯ ನಿಯಮಗಳೆಂದು ವೈಜ್ಞಾನಿಕರು ಕರೆಯುವ ನಿಯಮಗಳೆಲ್ಲ ಆ ಪರಮೇಶ್ವರನ ಮಹಿಮೆಯನ್ನೇ ವ್ಯಕ್ತಗೊಳಿಸುತ್ತಿರುವವು. ಇಡಿಯ ಜಗತ್ತಿನ ಸಾರವೇ ಈ ಪರಮಾತ್ಮತತ್ತ್ವವು. ಅದರಲ್ಲಿ ಲಕ್ಷ್ಯವಿಟ್ಟು ವ್ಯವಹಾರವನ್ನು ಮಾಡಿದರೆ ನಮ್ಮ ಜೀವನವು ಸುಗಮವಾಗಿ ಸಾಗುತ್ತದೆ ; ಸುಖದಲ್ಲಿ ಪರ್ಯವಸಾನವಾಗುತ್ತದೆ.

## ಎರಡು ದೃಷ್ಟಿಗಳು

ಪರಮಾತ್ಮ, ಭಗವಂತ, ಪರಮೇಶ್ವರ—ಎಂಬಿವು ಬರಿಯ ಮಾತುಗಳಲ್ಲ. ಈ ಪರಮಾರ್ಥತತ್ತ್ವವನ್ನು ಬರಿಯ ಶ್ರದ್ಧೆಯಿಂದ ನಂಬಬೇಕಾದದ್ದೇನೂ

ಇಲ್ಲ. ಏಕೆಂದರೆ **'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ'** ಎಂಬ ಶ್ರುತಿಯು ಹೇಳುವಂತೆ ಅದು ನಮ್ಮ ಶರೀರಾದಿಗಳೆಲ್ಲಕ್ಕೂ ಒಳಗಿರುವ ನಮ್ಮ ಆತ್ಮನೇ ಆಗಿರುವದರಿಂದ ನಮಗೆ ತೀರ ಅವ್ಯವಹಿತವಾಗಿ ಸಾಕ್ಷಾತ್ತಾಗಿ ಅನುಭವಕ್ಕೆ ಬರತಕ್ಕದ್ದಾಗಿದೆ. ನಾವು ಈಗ ಅನುಸರಿಸುತ್ತಿರುವ ದೃಷ್ಟಿಯು ಪರಾಗ್ದೃಷ್ಟಿ, ಎಂದರೆ ನಾನು ಎಂಬುದನ್ನು ಕೇಂದ್ರವಾಗಿಟ್ಟುಕೊಂಡು ಹೊರಗಿನ ಪದಾರ್ಥಗಳನ್ನೇ ನಿರೀಕ್ಷಣಪರೀಕ್ಷಣಗಳಿಂದ ತಿಳಿಯುತ್ತಿರುವದಕ್ಕೆ ಸಾಧನವಾದ ದೃಷ್ಟಿ. ಈ ದೃಷ್ಟಿಯಿಂದ ಪರಮಾತ್ಮತತ್ತ್ವವು ಗೋಚರವಾಗದು. ಏಕೆಂದರೆ ಆ ತತ್ತ್ವವು ಈ ಜಗತ್ತಿಗೆಲ್ಲ ತಿರುಳಾಗಿ, ನಮ್ಮ ಸ್ವರೂಪವೇ ಆಗಿ ತೀರ ಒಳಗೆ ಇದ್ದುಕೊಂಡಿರುವದು. ನಾವು ಏನೇನನ್ನು ನೋಡುತ್ತಿರುವೆವೋ ಅವನ್ನೆಲ್ಲ ಹೊರಕ್ಕೆ ತಳ್ಳಿ ಒಳಗೆ ನೋಡುತ್ತಿರುವ ನಾನು ಯಾರು ?–ಎಂದು ವಿಚಾರಿಸಿಕೊಳ್ಳಬೇಕು. ಯಾವದನ್ನು ನೋಡುತ್ತೇವೋ ಅದು ವಿಷಯ, ಅದನ್ನು ನೋಡುತ್ತಿರುವ ನಮ್ಮ ಸ್ವರೂಪವೇ ವಿಷಯಿ. ವಿಷಯಿಗಳೆಂದು ನಾವು ಭಾವಿಸುತ್ತಿರುವ ಇಂದ್ರಿಯ, ಮನಸ್ಸು–ಮುಂತಾದವುಗಳನ್ನೂ ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದೆ ಕಾಣುತ್ತಿರುವ ಸರ್ವಸಾಕ್ಷಿಯೇ ನಿಜವಾಗಿ ನಮ್ಮ ಆತ್ಮನು. ಯಾವದನ್ನೇ ಆಗಲಿ ಇದೆ, ಇಲ್ಲ–ಎನ್ನುವದೂ ಅದರ ಆಶ್ರಯದಿಂದಲೇ. ಸುರೇಶ್ವರಾಚಾರ್ಯರು ಅಂದಿರುವಂತೆ **'ಯತ್ಸಿದ್ಧಾವಿದಮಃ ಸಿದ್ಧಿರ್ಯದಸಿದ್ಧ್ಯಾ ನ ಕಿಂಚನ'** ಆ ಪರಮಾತ್ಮನ ಸಿದ್ಧಿಯಿಂದಲೇ ಇದು ಎಂದು ಹೇಳುತ್ತಿರುವದೆಲ್ಲವೂ ಸಿದ್ಧವಾಗುತ್ತದೆ ; ಅದರ ಆಶ್ರಯವಿಲ್ಲದೆ ಯಾವದೊಂದೂ ಸಿದ್ಧವಾಗಲೇ ಆರದು. ಅದರಲ್ಲಿ ನಾವು ನಿಂತು ನೋಡಿದರೆ ಎಲ್ಲಕ್ಕೂ ಅದೇ ಆಧಾರವೆಂದೂ ಅದರ ಬೆಳಕಿನಿಂದಲೇ ಎಲ್ಲವೂ ತೋರಿಕೊಳ್ಳುತ್ತಿರುವದೆಂದೂ ಇದೆಲ್ಲದರ ವ್ಯಾಪಾರವೂ ಅದರ ಅನುಗ್ರಹದಿಂದಲೇ ಎಂದೂ ಸ್ಪಷ್ಟವಾಗುವದು. ಈ ದೃಷ್ಟಿಗೆ ಪ್ರತ್ಯಗ್ದೃಷ್ಟಿ, ಒಳನೋಟ–ಎಂದು ಹೆಸರು.

## ಭಗವಂತನೇ ಎಲ್ಲಾ ಜ್ಞಾನಕ್ರಿಯೆಗಳ ಮೂಲವು

ಪ್ರತ್ಯಗ್ದೃಷ್ಟಿಯಿಂದ ನೋಡಿದಲ್ಲದೆ ಈ ಪರಮಾರ್ಥದ ಅರಿವು ನಮಗೆ ಆಗಲಾರದು. ಹೊರಗಿನ ಇಂದ್ರಿಯಗಳನ್ನುಪಯೋಗಿಸಿ ನಾವು ಎಷ್ಟು

ಪ್ರಯತ್ನಪಟ್ಟರೂ ನಮಗೆ ಅದರ ಇರವು ಮನವರಿಕೆಯಾಗುವದಿಲ್ಲ. ಆದರೆ ಕ್ರಮವರಿತು ನಮ್ಮಲ್ಲಿ ನಾವು ನೋಡಿಕೊಂಡರೆ ಈ ಇಡಿಯ ಜಗತ್ತಿನ ಕ್ರಿಯೆಗಳೆಲ್ಲಕ್ಕೂ ಜ್ಞಾನವೆಲ್ಲಕ್ಕೂ ಆಧಾರವಾಗಿರುವ ತತ್ತ್ವವೇ ಆದು ಎಂಬುದು ಸ್ಪಷ್ಟವಾಗುತ್ತದೆ.

ಒಂದಾನೊಂದು ಕಾಲದಲ್ಲಿ ಜನಕರಾಯನು ಒಂದು ಮಹಾಯಜ್ಞ ವನ್ನು ಮಾಡಲಾರಂಭಿಸಿದ್ದನು ಯಜ್ಞದಲ್ಲಿ ಸದಸ್ಸು ಎಂಬ ಸ್ಥಲದಲ್ಲಿ ವಿದ್ವಾಂಸರುಗಳನ್ನು ಸೇರಿಸಿರುತ್ತಾರೆ. ಒಂದೊಂದು ಶಾಸ್ತ್ರದಲ್ಲಿಯೂ ನಿಷ್ಣಾತರಾಗಿರುವ ಘಟಿಕರು ಅನೇಕರು ಅಲ್ಲಿ ಕುಳಿತಿರುತ್ತಾರೆ. ಅವರು ಬರಿಯ ಕರ್ಮವಿಚಾರವನ್ನು ಮಾತ್ರವೇ ಅಲ್ಲ; ಪರಮಾರ್ಥವಿಚಾರವನ್ನೂ ಮಾಡುತ್ತಿರುತ್ತಾರೆ. ಪ್ರಕೃತ ಯಜ್ಞದ ಆ ಸಂದರ್ಭದಲ್ಲಿ ಕುರುಪಾಂಚಾಲ ದೇಶಗಳ ಮಹಾವಿದ್ವಾಂಸರುಗಳು ಸದಸ್ಸಿನಲ್ಲಿ ನೆರೆದಿದ್ದದ್ದನ್ನು ಕಂಡು ಅಧ್ಯಾತ್ಮವಿದ್ಯಾರಸಿಕನಾದ ಜನಕನು ಒಂದು ಸಾವಿರ ಗೋಗಳನ್ನು ಒಟ್ಟಿಗೆ ಕೂಡಿಸಿ ಒಂದೊಂದರ ಕೋಡುಗಳಿಗೂ ಹತ್ತುಹತ್ತು ಪಾದ ತೂಕದ ಚಿನ್ನದ ಕೋಡಣಸುಗಳನ್ನು ಹಾಕಿಸಿದ್ದನು. 'ಬ್ರಾಹ್ಮಣಶ್ರೇಷ್ಠರೆ, ನಿಮ್ಮಲ್ಲಿ ಯಾವನು ಬ್ರಹ್ಮಿಷ್ಠನೋ ಅವನು ಆ ಗೋಗಳನ್ನು ಹೊಡೆದುಕೊಂಡು ಹೋಗಲಿ!' ಎಂದು ಘೋಷಣೆಮಾಡಿಸಿದನು. ಸಾವಿರಾರು ವಿದ್ವಾಂಸರಿರುವ ಸಭೆಯಲ್ಲಿ 'ನಾನೇ ಶ್ರೇಷ್ಠಬ್ರಹ್ಮಜ್ಞಾನಿಯು'ಎಂದು ಯಾವನುತಾನೆ ಧೈರ್ಯ ದಿಂದ ಹೇಳಿಕೊಂಡಾನು? ಎಲ್ಲರೂ ಸುಮ್ಮನಿದ್ದರು. ಆದರೆ ಯಾಜ್ಞ ವಲ್ಕ್ಯನು ತನ್ನ ಶಿಷ್ಯನನ್ನು ಕುರಿತು 'ಈ ಗೋಗಳನ್ನು ನಮ್ಮ ಆಶ್ರಮಕ್ಕೆ ಹೊಡೆದುಕೊಂಡು ಹೋಗು!' ಎಂದು ಅಪ್ಪಣೆಮಾಡಿದನು. ಯಾಜ್ಞ ವಲ್ಕ್ಯನು ಚತುರ್ವೇದಗಳನ್ನೂ ಬಲ್ಲವನು. ಕರ್ಮೋಪಾಸನೆಗಳ ತತ್ತ್ವ ವನ್ನಲ್ಲದೆ ಬ್ರಹ್ಮತತ್ತ್ವವನ್ನೂ ಬಲ್ಲವನು. ವೇದವಿದ್ಯಾವಿಶಾರದರೂ ತುಂಬಿ ತುಳುಕುತ್ತಿದ್ದ ಆ ಸಭೆಯಲ್ಲಿ ಬ್ರಹ್ಮಿಷ್ಠಪಣವನ್ನು ಸ್ವೀಕಾರಮಾಡಿದನು, ಆ ಧೀರ! ಆಗ ಸಭೆಯಲ್ಲಿ ಕೋಲಾಹಲವಾಯಿತು. ಬ್ರಾಹ್ಮಣರೆಲ್ಲರೂ ಕ್ರುದ್ಧ ರಾಗಿ ಒಬ್ಬೊಬ್ಬರಾಗಿ ಯಾಜ್ಞವಲ್ಕ್ಯನನ್ನು ವಿಧವಿಧವಾಗಿ ಬ್ರಹ್ಮವಿಷಯ ವಾಗಿ ಪ್ರಶ್ನಿಸುವದಕ್ಕೆ ಆರಂಭಿಸಿದರು. ಯಾಜ್ಞವಲ್ಕ್ಯನು ಅವರ ಪ್ರಶ್ನೆ ಗಳಿಗೆಲ್ಲ ಸಮಾಧಾನದಿಂದ ಉತ್ತರವನ್ನು ಕೊಡುತ್ತಾಬಂದನು. ಈ ವೃತ್ತಾಂ ತವು ಬೃಹದಾರಣ್ಯಕೋಪನಿಷತ್ತಿನಲ್ಲಿ ಬಂದಿರುತ್ತದೆ.

ಹೀಗೆ ಪ್ರಶ್ನಿಸಿದವರಲ್ಲಿ ಉದ್ದಾಲಕನ ಆರುಣಿ ಎಂಬವನೊಬ್ಬನು. ಆವನು "ಈ ಲೋಕವನ್ನೂ ಪರಲೋಕವನ್ನೂ ಬ್ರಹ್ಮಾದಿಸ್ತಂಬಪರ್ಯಂತ ವಾದ ಸಕಲಭೂತಗಳನ್ನೂ ದಾರದಿಂದ ಹೂಮಾಲೆಯನ್ನು ಕಟ್ಟಿರುವಂತೆ ಕಟ್ಟಿರುವ ಸೂತ್ರವು ಯಾವದು ? ಈ ಲೋಕವನ್ನೂ ಪರಲೋಕವನ್ನೂ ಸರ್ವಭೂತಗಳನ್ನೂ ಅವುಗಳೊಳಗೆ ಇದ್ದುಕೊಂಡು ನಿಯಂತ್ರಿಸುತ್ತಿರುವ ಅಂತರ್ಯಾಮಿ ಯಾರು ? ಹೇಳು !" ಎಂದು ಕೇಳಿದನು. ಆಗ ಯಾಜ್ಞ ವಲ್ಕ್ಯನು ಕೊಟ್ಟ ಉತ್ತರವಿದು : 'ಇಡಿಯ ಜಗತ್ತನ್ನೇ ಹೂಮಾಲೆಯಂತೆ ಕಟ್ಟಿರುವ ಪ್ರಾಣವಾಯುವೇ ಸೂತ್ರವು ; ಅದರಿಂದಲೇ ಪ್ರಾಣಿಗಳು ಕಟ್ಟು ವಡೆದು ಕೆಲಸಮಾಡುತ್ತಿರುವೆವು. ಆದ್ದರಿಂದಲೇ ಮನುಷ್ಯನು ಸಾಯುವಾಗ ಈ ಸೂತ್ರದ ಅನುಗ್ರಹವಿಲ್ಲದ್ದರಿಂದ ಅಂಗಾಂಗಗಳು ಸಡಿಲವಾಗಿ ಬಿಡುತ್ತವೆ' ಈ ಗ್ರಹಗಳೆಲ್ಲವೂ ಯಾವ ಶಕ್ತಿಯಿಂದ ಹಿಡಿಯಲ್ಪಟ್ಟು ಉಂಡೆಯಾಗಿ ನಿಂತಿವೆ ? ಸಕಲಪ್ರಾಣಿಗಳ ಶರೀರಗಳೂ ಸಡಿಲುಬಿಟ್ಟುಕೊಳ್ಳದೆ ಒಂದು ಶರೀರ ಎಂಬ ವ್ಯವಹಾರವನ್ನು ಪಡೆದಿರುವದಕ್ಕೆ ಕಾರಣವು ಯಾವದು ? ನಮ್ಮ ಇಂದ್ರಿಯಗಳೂ ಮನೋಬುದ್ಧಿಗಳೂ ತಮ್ಮ ತಮ್ಮ ವ್ಯಾಪಾರಗಳನ್ನು ಮಾಡುತ್ತಿರುವಂತೆ ಇವನ್ನೆಲ್ಲ ಜೋಡಿಸಿಟ್ಟುಕೊಂಡಿರುವ ಶಕ್ತಿಯು ಯಾವದು? ಇದನ್ನು 'ಪ್ರಕೃತಿನಿಯಮ' ಎಂಬ ಹೆಸರಿನಿಂದ ಕರೆದಮಾತ್ರದಿಂದ ನಾವು ವಿಷಯವನ್ನು ವಿವರಿಸಿದಂತೆ ಆಗುವದಿಲ್ಲ. ಸಕಲಕ್ರಿಯೆಗಳಿಗೂ ಮೂಲ ವಾಗಿರುವ ಒಂದಾನೊಂದು ಶಕ್ತಿಯಿರಬೇಡವೆ ? ಭೌತಿಕತತ್ತ್ವವು ದ್ರವ್ಯ ಮಾತ್ರವಲ್ಲವೆಂದೂ ಕೊನೆಗೂ ಇದೆಲ್ಲವೂ (energy)ಯೊಂದೇ ತೀರ್ಮಾನ ವಾಗುವದೆಂದೂ ವೈಜ್ಞಾನಿಕರು ಹೇಳುತ್ತಿದ್ದಾರೆ. ಆದರೆ ಆ ಶಕ್ತಿಯ ನಿಜವು ಯಾವದು ? ಅದು ಕೇವಲ ಅಚೇತನವಲ್ಲ, ಎಲ್ಲದರ ಚಲನವಲನಗಳಿಗೂ ಮೂಲವಾಗಿರುವದು ಪರಮಾತ್ಮನ ಶಕ್ತಿಯೇ. 'ಯತಃ ಪ್ರವೃತ್ತಿರ್ಭೂತಾ ನಾಮ್' ಎಂಬಂತೆ ನಮ್ಮ ಪ್ರವೃತ್ತಿಗಳಿಗೆಲ್ಲ ಮೂಲವಾಗಿರುವದು ಪರಮಾತ್ಮ ಶಕ್ತಿಯೇ ; ಕ್ರಿಯಾಶಕ್ತಿಪ್ರಧಾನವಾಗಿರುವ ಈ ತತ್ತ್ವವನ್ನು ವೇದಾಂತಿಗಳು 'ಸಮಷ್ಟಿಪ್ರಾಣವಾಯು' ಎಂದು ಕರೆದಿರುತ್ತಾರೆ. ಇದೇ ಸೂತ್ರವು.

ಇನ್ನು ಅಂತರ್ಯಾಮಿಯ ವಿಚಾರ. ಯಾಜ್ಞವಲ್ಕ್ಯನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ—ಎಂಬ ಮೂರು ಬಗೆಯ ಜಗತ್ತಿನೊಳಗೂ ಈ

ಅಂತರ್ಯಾಮಿರೂಪನಾದ ಪರಮಾತ್ಮನು ಇದ್ದುಕೊಂಡು ಎಲ್ಲವನ್ನೂ ಆಳುತ್ತಿರುವನು ಎಂದು ವಿವರಿಸಿರುತ್ತಾನೆ. "ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅನ್ತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮನ್ತರೋ ಯಮಯತ್ಯೇಷ ತ ಆತ್ಮಾಽನ್ತರ್ಯಾಮ್ಯ ಮೃತಃ" (ಬೃ. ೩-೭-೩) ಈ ಅಂತರ್ಯಾಮಿಯು ಪೃಥಿವಿಯಲ್ಲಿರುತ್ತಾನೆ, ಪೃಥಿವಿಯೊಳಗೆ ಇರುತ್ತಾನೆ. ಆದರೆ ಪೃಥಿವೀದೇವತೆಗೂ ಈ ಅಂತರ್ಯಾಮಿಯ ಸ್ವರೂಪವು ತಿಳಿಯದು. ಈ ಪೃಥಿವಿಯು ಆತನ ಶರೀರದಂತೆ ಇರುತ್ತದೆ. ಯಾವನು ಈ ಪೃಥಿವಿಯೊಳಗಿದ್ದು ಅದನ್ನು ನಿಯಮದಲ್ಲಿಟ್ಟು ಕೊಂಡಿರುವನೋ ಅವನೇ ನಿನ್ನ ಅಂತರ್ಯಾಮಿಯು, ಅಮೃತನು !

ಈ ವಾಕ್ಯದ ಅಭಿಪ್ರಾಯವನ್ನಿಷ್ಟು ವಿವರಿಸುವದು ಅವಶ್ಯವಾಗಿರುತ್ತದೆ. ಪೃಥಿವಿಯ ಒಳಗೆ ಅಂತರ್ಯಾಮಿ ಇರುತ್ತಾನೆ-ಎಂಬುದರ ಅರ್ಥವೇನು ? ಭೂಗರ್ಭಶಾಸ್ತ್ರವನ್ನು ಬಲ್ಲವರು ಭೂಮಿಯ ಪದರಗಳನ್ನು ಪರೀಕ್ಷಿಸಿರುತ್ತಾರೆ. ಭೂಮಿಯ ಮೇಲುಭಾಗವು ಮಾತ್ರ ನಾವು ವಾಸಮಾಡಿಕೊಂಡಿರುವದಕ್ಕೆ ಅರ್ಹವಾಗಿದೆ; ಅದನ್ನು ನಾವು ಉತ್ತು ಅದರಲ್ಲಿ ಬೀಜವನ್ನು ಬಿತ್ತಿ ಪೈರನ್ನು ಬೆಳೆದುಕೊಳ್ಳಬಹುದು. ಇನ್ನೂ ಒಳಕ್ಕೆ ಹೋದರೆ ಇಂಥಿಂಥ ಭೂಮಿಯ ಪದರಗಳು ಸಿಕ್ಕುವವು, ಒಳಗೆ ಬಹಳ ಶಾಖವಾಗಿದೆ, ನೀರಿನ ಪ್ರವಾಹಗಳು ಆಡುತ್ತಿರುತ್ತವೆ-ಇತ್ಯಾದಿಯಾಗಿ ಭೂಸ್ವಭಾವವನ್ನು ಭೌತಿಕಜ್ಞಾನಶಾಸ್ತ್ರಜ್ಞರು ವಿವರಿಸಿ ಹೇಳುತ್ತಾರೆ. ಆದರೆ ಇಲ್ಲಿ ಭೂಮಿಯೊಳಗೆ ಇರುವವನು ಎಂದರೆ ಹೀಗಲ್ಲ. ಭೂಮಿಯನ್ನು ಮೇಲುಮೇಲಿನಿಂದ ನೋಡಿ ಅದರ ಒಳಹೊಕ್ಕು ಏನೇನು ಕಾಣಿಸುವದೆಂಬುದನ್ನು ಪರೀಕ್ಷಿಸುವ ಐಂದ್ರಿಯಕ ದೃಷ್ಟಿಯು ಸಾಮಾನ್ಯ ವ್ಯವಹಾರಕ್ಕೆ ಸಾಕಾದರೂ ತತ್ತ್ವನಿರ್ಧಾರಣೆಗೆ ಅದರಿಂದ ಯಾವ ಉಪಯೋಗವೂ ಇಲ್ಲ. ಪೃಥಿವಿಯೊಳಗೆ ಇರುವ ಈ ಅಂತರ್ಯಾಮಿಯು 'ನಿನ್ನ ಆತ್ಮನು' ಎಂದು ಯಾಜ್ಞವಲ್ಕ್ಯನು ಹೇಳಿರುವದನ್ನು ಲಕ್ಷ್ಯವಿಟ್ಟು ನೋಡಬೇಕು. ನಮ್ಮ ಆತ್ಮನು ಭೂಮಿಯೊಳಗೆ ಹೇಗೆ ಇದ್ದಾನು ? ನಮ್ಮ ಆತ್ಮನು 'ನಾನು' ಎಂಬ ತತ್ತ್ವವೆಂದಾದರೆ ಅದು ಈ ನಮ್ಮ ಶರೀರದಲ್ಲಿ ಮಾತ್ರವೇ ಇರಬಲ್ಲದು. ಅದಕ್ಕೆ ಮತ್ತೆಲ್ಲಿಯೂ ಪ್ರವೇಶವಿಲ್ಲ. 'ಶರೀರಕರಣಗಳ ಸಂಘಾತದ ಅಭಿಮಾನಿಯಾದ ಈ ನಾನು

ಎಂಬ ಪರಿಚ್ಛಿನ್ನಾತ್ಮನನ್ನು ಇಲ್ಲಿ ಯಾಜ್ಞವಲ್ಕ್ಯನು ಪರಾಮರ್ಶಿಸಿರುವದಿಲ್ಲ. ಈ ನಾನು ಎಂಬುದಕ್ಕೂ ಒಳಗಿದ್ದು ಇದರ ಆಗ-ಹೋಗುಗಳನ್ನು ನೋಡುತ್ತಾ ಇದನ್ನೂ ತನ್ನ ವಶದಲ್ಲಿಟ್ಟುಕೊಂಡಿರುವ ಪರಮಾತ್ಮವಸ್ತುವೊಂದಿದೆ. ಇದನ್ನು ಪ್ರತ್ಯಗ್ದೃಷ್ಟಿಯಿಂದಲೇ ಕಂಡುಕೊಳ್ಳಬೇಕು. ಈ ಆತ್ಮವು ಪ್ರತಿಯೊಬ್ಬನೂ ತನ್ನೊಳಗೆ ತಾನು ಹೊಕ್ಕು ನೋಡಿ ಅನುಭವದಿಂದ ತಿಳಿದುಕೊಳ್ಳಬಹುದಾದದ್ದಾದರೂ ಮಾತುಗಳಿಂದ ತಿಳಿಸುವದಕ್ಕೆ ಬರುವದಿಲ್ಲ. ಆದ್ದರಿಂದ ಭೂಮಿಗೆ ಅಭಿಮಾನಿಯಾದ ದೇವತೆಗೂ ತನ್ನೊಳಗೆ ಒಬ್ಬ ಪರಮಾತ್ಮನು ಇದ್ದು ತನ್ನನ್ನು ಕಟ್ಟಿನಲ್ಲಿಟ್ಟುಕೊಂಡಿರುತ್ತಾನೆಂಬುದು ತಿಳಿಯದು ಎಂದು ಯಾಜ್ಞವಲ್ಕ್ಯನು ಹೇಳಿರುತ್ತಾನೆ.

ಈ ನಮ್ಮೊಳಗಿರುವ ಪರಮಾತ್ಮನಿಗೆ ಪೃಥಿವಿಯೂ ಶರೀರವಾಗಿರುವದು ಎಂದು ಹೇಳಿರುವದನ್ನು ಈಗ ವಿಚಾರಕ್ಕೆ ತೆಗೆದುಕೊಳ್ಳೋಣ. ನಮ್ಮೊಳಿನ ನಾನು ಎಂಬುದಕ್ಕೆ ಈ ಗೊತ್ತಾದ ಶರೀರವೊಂದೇ ಶರೀರವು. ಈ ಶರೀರವನ್ನು ಬಿಟ್ಟು ಅದು ಮತ್ತೆಲ್ಲಿಯೂ ಕೆಲಸಮಾಡಲರಿಯದು. ಆದರೆ ಇದಕ್ಕೂ ಸಾಕ್ಷಿಯಾಗಿರುವ ನಮ್ಮೊಳಗಿನ ಆತ್ಮನು ನಮ್ಮ ಶರೀರದಲ್ಲಿ ನಮಗೆ ಕಂಡುಬರುವನಾದರೂ ಅವನು ಈ ಶರೀರಕ್ಕೇನೂ ಕಟ್ಟುಬಿದ್ದಿರುವದಿಲ್ಲ. ಅವನಿಗೆ ಇಡಿಯ ಜಗತ್ತೇ ಸಾಕ್ಷ್ಯವಾಗಿರುತ್ತದೆ. ನಮಗೆ ನಮ್ಮ ಶರೀರವು ಅಧೀನದಲ್ಲಿರುವಂತೆ ಪೃಥಿವಿಯೇ ಮುಂತಾದದ್ದೆಲ್ಲವೂ ಅವನಿಗೆ ಅಧೀನವಾಗಿರುತ್ತದೆ. ಆದ್ದರಿಂದ ಅಪ್ಪು, ತೇಜಸ್ಸು, ವಾಯು, ಆಕಾಶ, ಅಂತರಿಕ್ಷ, ಆದಿತ್ಯ, ಚಂದ್ರ, ದಿಕ್ಕುಗಳು, ಸರ್ವಭೂತಗಳು, ಎಲ್ಲರೊಳಗಿನ ಪ್ರಾಣಾಪಾನಾದಿಗಳು, ಚಕ್ಷುರಾದಿಗಳು, ಮನೋಬುದ್ಧಿಗಳು– ಇವೆಲ್ಲವೂ ಅವನಿಗೆ ಸಾಕ್ಷ್ಯವಾಗಿದ್ದುಕೊಂಡು ಅವನ ವಶದಲ್ಲಿಯೇ ಇರುವವು. ಆದ್ದರಿಂದ ಇವುಗಳಲ್ಲಿ ಯಾವದೊಂದನ್ನಾದರೂ ಅವನ ಶರೀರ ಎನ್ನಬಹುದಾಗಿದೆ. ಈ ಅರ್ಥದಲ್ಲಿ ಅವನು ಈ ಎಲ್ಲಕ್ಕೂ ಅಂತರ್ಯಾಮಿಯಾಗಿರುತ್ತಾನೆ. ಈ ಎಲ್ಲಕ್ಕೂ ಆತನೊಬ್ಬನೇ ಆತ್ಮನು. ಆತನೇ ಎಲ್ಲವನ್ನೂ ನೋಡುತ್ತಿರುವವನು, ಅವನನ್ನು ಮತ್ತೆ ಯಾವ ಕರಣದಿಂದಲೂ ನೋಡುವದಕ್ಕಾಗಲಾರದು. ಆತನು ಸ್ವಯಂಸಿದ್ಧನಾದ ಚೈತನ್ಯಜ್ಯೋತಿಯಾಗಿರುವದರಿಂದ ನಾಶರಹಿತನಾಗಿರುವನು. ಆ ಜ್ಯೋತಿಯ ಸಂನಿಧಿಯಲ್ಲಿಯೇ, ಆತನ

ಅನುಗ್ರಹದಿಂದಲೇ, ನಾನು ನೀನು ಎಲ್ಲರೂ ನಮ್ಮನಮ್ಮ ಕೆಲಸವನ್ನು ಮಾಡಿಕೊಂಡು ಆಯಾ ಕ್ರಿಯೆಯ ಫಲವನ್ನು ಪಡೆದುಕೊಂಡು ಅನುಭವಿಸುತ್ತಿರುವೆವು. ಇದೇ ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮಾತ್ಮನ ಸ್ವರೂಪ!

## ಪ್ರತ್ಯಗ್ದೃಷ್ಟಿಯವರ ವ್ಯವಹಾರ

ನಮ್ಮನಮ್ಮಲ್ಲಿಯೇ ಒಳಹೊಕ್ಕು ನೋಡಿದರೆ ಸ್ವಯಂಸಿದ್ಧವಾದ ಆತ್ಮಸ್ವರೂಪವು ಗೊತ್ತಾಗುವದೆಂದೂ, ಆ ಆತ್ಮನಲ್ಲಿ ನಿಂತು ಪ್ರಪಂಚವನ್ನು ನೋಡುವವರ ದೃಷ್ಟಿಯೇ ಬೇರೊಂದು ಬಗೆಯಾಗಿರುವದೆಂದೂ ತಿಳಿಸಿದ್ದಾಯಿತು. ಈ ಪ್ರತ್ಯಗ್ದೃಷ್ಟಿಯಿಂದ ನೋಡಿದಾಗ ನಮ್ಮೆಲ್ಲರಿಗೂ ಒಬ್ಬನೇ ಆತ್ಮನೆಂಬುದು ಕಂಡುಬರುವದು. ಈ ಆತ್ಮನು ಅಖಂಡವಾದ ಅನಂತವಾದ ಆನಂದದ ಸ್ವರೂಪನಾಗಿರುವದರಿಂದ ನಮಗೆ ಬೇಕಾದ ಸುಖವನ್ನು ಹೊರಗಿನ ಯಾವದೊಂದು ಪರಿಚ್ಛಿನ್ನವಸ್ತುವಿನಿಂದಲೂ ತೆಗೆದುಕೊಂಡು ಅನುಭವಿಸಬೇಕಾದ ಆವಶ್ಯಕತೆಯಿರುವದಿಲ್ಲ. ಈ ದೃಷ್ಟಿಯಲ್ಲಿ ಪ್ರತಿಯೊಬ್ಬನೂ ನಮ್ಮ ಆತ್ಮನೇ ಆಗಿರುವದರಿಂದ ನಮ್ಮನಮ್ಮಲ್ಲಿ ಶತ್ರುಮಿತ್ರೋದಾಸೀನಭಾವವಿರುವ ಹಾಗಿಲ್ಲ; ನಮ್ಮಲ್ಲಿ ಒಬ್ಬರಲ್ಲೊಬ್ಬರಿಗೆ ಸಂಶಯವಾಗಲಿ ಒಬ್ಬರಿಂದೊಬ್ಬರಿಗೆ ಅಂಜಿಕೆಯಾಗಲಿ ಉಂಟಾಗುವಹಾಗಿಲ್ಲ. ಪರಾಗ್ದೃಷ್ಟಿಯ ಜನರ ಭಾವನೆಯಲ್ಲಿ ಪರಿಚ್ಛಿನ್ನಪ್ರಮಾಣದ ಸುಖಸಾಮಗ್ರಿಯಿರುತ್ತದೆ; ಆದ್ದರಿಂದ ಅವರಲ್ಲಿ ಪೈಪೋಟಿ ಉಂಟಾಗುವದು. ಆದರೆ ಸಕ್ಕರೆಯ ಬೆಟ್ಟವನ್ನು ಕಂಡ ಇರುವೆಗಳು ಎಷ್ಟು ಪರಿಮಾಣದ ಸಕ್ಕರೆಯನ್ನು ಎತ್ತಿಕೊಂಡು ಹೋದರೆತಾನೆ, ಸಕ್ಕರೆಯು ಇಲ್ಲವೆಂಬ ಕಾಲವು ಬಂದೀತು? ನಮ್ಮೆಲ್ಲರನ್ನೂ ಆನಂದಪಡಿಸುವ ಪರಮಾತ್ಮವಸ್ತು ನಮ್ಮನಮ್ಮಲ್ಲಿಯೇ ಇದೆ. ಅದು ಅಕ್ಷಯವಾದ ಆನಂದಾಮೃತವಾದ ಬುಗ್ಗೆಯಾಗಿರುತ್ತದೆ. ನಾವು ಏತಕ್ಕೆ ಅವಸರಪಡಬೇಕು? ಒಬ್ಬರನ್ನೊಬ್ಬರು ಏತಕ್ಕೆ ಕೆಂಗಣ್ಣಿನಿಂದ ನೋಡಬೇಕು? ಅದರ ವಿಷಯಕ್ಕೆ ಒಬ್ಬರಿಗೊಬ್ಬರಿಗೆ ಜಗಳವಾದರೂ ಏತಕ್ಕೆ ಆಗಬೇಕು?

ನಿಜವಾಗಿ ನೋಡಿದರೆ ನಾವುಗಳೆಲ್ಲರೂ ಆನಂದಸ್ವರೂಪವಾದ ಬ್ರಹ್ಮದಿಂದಲೇ ಬಂದಿರುತ್ತೇವೆ; ಆ ಬ್ರಹ್ಮದಲ್ಲಿಯೇ ಇದ್ದುಕೊಂಡು ಜೀವಿಸು

ತ್ತಿದೇವೆ ; ಕೊನೆಗೂ ಆ ಬ್ರಹ್ಮವನ್ನೇ ಸೇರುವವರಾಗಿರುತ್ತೇವೆ. ನಮ್ಮೆಲ್ಲರ ಯೋಗಕ್ಷೇಮವನ್ನೂ ಆ ಪರಮಾತ್ಮನೇ ನೋಡಿಕೊಳ್ಳುತ್ತಿದಾನೆ. ನಾವು ಪರಾಗ್ದೃಷ್ಟಿಯಿಂದ ನೋಡುವ ಅಲ್ಪಬುದ್ಧಿಯನ್ನು ಬಿಡಬೇಕು. ನಮ್ಮೆಲ್ಲ ರಲ್ಲಿಯೂ ಆ ಆನಂದಸ್ವರೂಪನಾದ ಪರಮಾತ್ಮನೇ ಇರುತ್ತಾನೆ; ಪ್ರತಿಯೊಬ್ಬ ನಲ್ಲಿಯೂ ಸಂಪೂರ್ಣವಾಗಿಯೇ ಇರುತ್ತಾನೆ. ಐಶ್ವರ್ಯವಂತರಲ್ಲಿ ಅವನ ಇರವು ಹೆಚ್ಚಾಗಿರುವದಿಲ್ಲ; ಬಡವರಲ್ಲಿ ಕಡಿಮೆಯಾಗಿರುವದಿಲ್ಲ ; ವಿದ್ಯಾವಂತ ರಲ್ಲಿ ಹೆಚ್ಚಾಗಿ, ಅವಿದ್ಯಾವಂತರಲ್ಲಿ ಕಡಿಮೆಯಾಗಿಯೂ ಇರುವದಿಲ್ಲ. ವೇದದಲ್ಲಿ ಬ್ರಹ್ಮಸೂಕ್ತವೆಂಬ ಒಂದು ಸೂಕ್ತವುಂಟು. ಅದರಲ್ಲಿ ಹೀಗಿದೆ ; 'ಬ್ರ ದಾಶಾ ಬ್ರಹ್ಮ ದಾಸಾ ಬ್ರಹ್ಮೈವೇಮೇ ಕಿತವಾಃ' ಮೀನುಹಿಡಿಯುವ ಬೆಸ್ತರು, ಆಗರ್ಭದಾಸರಾಗಿರುವವರು, ಜೂಜಾಡುವ ಪದ್ಧತಿಯ ಕೀಳು ಜನರು- ಇವರೆಲ್ಲರೂ ಬ್ರಹ್ಮವೇ ಎಂದು ಈ ವಾಕ್ಯದ ಅರ್ಥ. ಅತ್ಯಂತ ಜುಗುಪ್ಸಿತಕರ್ಮವನ್ನು ಮಾಡುವವರ ಆತ್ಮನೂ, ಅತ್ಯಂತ ಪರವಶರಾಗಿರು ವವರ ಆತ್ಮನೂ, ಪರವಂಚನೆಯನ್ನು ಮಾಡುವ ಧೂರ್ತರ ಆತ್ಮನೂ ಅದೇ ಪರಮಾತ್ಮನು-ಎಂದಮೇಲೆ ದೇವತೆಗಳು, ಋಷಿಗಳು-ಮುಂತಾದವರ ಆತ್ಮನ ವಿಷಯದಲ್ಲಿ ಹೇಳಬೇಕಾದದ್ದೇನಿದೆ ? ಹೆಂಗಸರಲ್ಲಿ ಗಂಡಸರಲ್ಲಿ, ತರುಣರಲ್ಲಿ, ತರುಣಿಯರಲ್ಲಿ, ವೃದ್ಧರಲ್ಲಿ, ಬಾಲಕರಲ್ಲಿ-ಎಲ್ಲರಲ್ಲಿಯೂ ಸಮವಾಗಿಯೇ ಆ ಆನಂದಬ್ರಹ್ಮವೇ ಇರುವದೆಂಬುದನ್ನು ನಾವೂ ಮನದಟ್ಟುಮಾಡಿಕೊಂಡು, ಈ ಅನುಭವದ ಬಲದಿಂದ ನಮ್ಮ ವ್ಯವಹಾರದಲ್ಲಿಯೂ ಇದನ್ನು ತೋರಿ ಸೋಣ ; ಎಲ್ಲೆಲ್ಲಿಯೂ ಪರಮಾತ್ಮನನ್ನೇ ಕಾಣುವ ಪರಭಕ್ತಿಯಿಂದ ಎಲ್ಲ ರನ್ನೂ ಆನಂದಗೊಳಿಸೋಣ !

ಲೋಕದಲ್ಲಿ ಬ್ರಹ್ಮಜ್ಞಾನಿಗಳು ಹೆಚ್ಚಿದಷ್ಟೂ ಕಲ್ಯಾಣವಾಗುವದು. ಏಕೆಂದರೆ ಅವರು ಯಾವಾಗಲೂ ಪರಮಾತ್ಮನನ್ನೇ ಅನನ್ಯಭಕ್ತಿಯಿಂದ ತಮ್ಮ ಹೃದಯದಲ್ಲಿಟ್ಟುಕೊಂಡು ಎಲ್ಲೆಲ್ಲಿಯೂ ಆತನನ್ನೇ ಕಾಣುತ್ತಾ ಆತನ ಆರಾಧನೆಯಲ್ಲಿಯೇ ನಿರತರಾಗಿರುತ್ತಾರೆ. ಅವರಿಗೆ ಯಾವ ಸ್ವಾರ್ಥವೂ ಇರುವದಿಲ್ಲ. ಸರ್ವರಿಗೂ ಆತ್ಮನಾಗಿರುವ ಪರಮಾತ್ಮನಿಗಾಗಿಯೇ ಪ್ರಾಣ ವನ್ನಿಟ್ಟುಕೊಂಡಿರುವವರು ಅವರು ; ಎಲ್ಲರಿಗೂ ಕಲ್ಯಾಣವನ್ನೇ ಕೋರುವ ರಾದ್ದರಿಂದ ಅವರು ಸರ್ವೋತ್ಸಾಹದಿಂದಲೂ ಪರಮಾತ್ಮತತ್ತ್ವವನ್ನೇ

ಎಲ್ಲರಿಗೂ ನಿರ್ವಂಚನೆಯಿಂದ ಬೋಧಿಸುತ್ತಿರುವದು. ಜ್ಞಾನಿಗಳಿದ್ದಲ್ಲಿ ಶಾಂತಿಯು ಅವಶ್ಯವಾಗಿ ನೆಲಸುವದು. ಏಕೆಂದರೆ ಅವರೇ ಶಾಂತಿಮೂರ್ತಿಗಳಾಗಿರುತ್ತಾರೆ. '**ತೇಷಾಂ ಶಾನ್ತಿರ್ನೇತರೇಷಾಮ್**' ಅವರಿಗೇ ಶಾಂತಿಯು ವಶವಾಗುವದೇ ಹೊರತು ಮಿಕ್ಕವರಿಗೆ ಅದು ಲಭಿಸದು. ಕೆಲವು ವರ್ಷಗಳ ಹಿಂದೆ ಅಮೆರಿಕದಲ್ಲಿ ಒಬ್ಬ ರಾಜನೀತಿನಿಪುಣನು ಪ್ರತಿಯೊಂದು ರಾಷ್ಟ್ರದಲ್ಲಿಯೂ ಒಬ್ಬೊಬ್ಬ ಶಾಂತಿಕಾರ್ಯದರ್ಶಿ (Peace Secretary) ಇರಬೇಕೆಂಬ ಉಪದೇಶವನ್ನು ಪ್ರಚಾರಕ್ಕೆ ತರಬೇಕೆಂದು ಬಹಳ ಪ್ರಯತ್ನ ಮಾಡಿದನು. ಆದರೆ ಯುದ್ಧಕಾರ್ಯದರ್ಶಿಯೊಬ್ಬನು ಇರುವವರೆಗೆ ಆ ಶಾಂತಿಕಾರ್ಯದರ್ಶಿ ಇದ್ದರೆತಾನೆ ಏನು ಮಾಡಿಯಾನು ? ಕಮ್ಮಾರನ ಅಂಗಡಿಯಲ್ಲಿ ಆಗಸರವನು ಬಟ್ಟೆಗಳನ್ನು ಮಡಿಯಾಗಿಟ್ಟುಕೊಳ್ಳುವದಕ್ಕೆ ಆದೀತೆ ? ಎಂದಿಗೂ ಇಲ್ಲ. ಶಾಂತಿಯು ರಾಜಕಾರಣಕ್ಕೆ ದಕ್ಕುವದಲ್ಲ. ಅದು ಬ್ರಹ್ಮಜ್ಞಾನಿಗಳ ಅಸಾಧಾರಣ ಸ್ವತ್ತು. ಅವರು ಎಲ್ಲಿದ್ದರೂ ಅಲ್ಲಿ ಶಾಂತಿಯ ಬೆಳದಿಂಗಳು ಹರಡಿಕೊಂಡಿರುತ್ತದೆ ! ಪರಮಾತ್ಮದೃಷ್ಟಿಯಿಂದ ಈ ಜಗತ್ತನ್ನು ನೋಡಿದಾಗಲೇ ಮಾನವನಿಗೆ ಆನಂದವು; ಇಲ್ಲದಿದ್ದರೆ ದುಃಖವು ತಪ್ಪಿದ್ದಲ್ಲ. ಈ ಬ್ರಹ್ಮಸ್ವರೂಪವನ್ನು ಅರಿತಿರುವವರೇ ನಿಜವಾಗಿ ಬ್ರಾಹ್ಮಣರು. ಬ್ರಾಹ್ಮಣರು ವೈಶ್ವದೇವವೆಂಬ ಕರ್ಮವನ್ನು ಮಾಡುವರು ; ಅಗ್ಗಿ ಅತಿಥಿಯಾಗಿ ಬಂದವನ ಜಾತಿಕುಲವನ್ನು ವಿಚಾರಿಸದೆ ಅವನಿಗೆ ಆಹಾರಾದಿಗಳನ್ನು ಕೊಟ್ಟು ಸತ್ಕಾರವನ್ನು ಮಾಡಬೇಕೆಂಬ ವಿಧಿಯುಂಟು. ಮನುಷ್ಯನು ತಿನ್ನುವ ಆಹಾರವನ್ನು 'ನನಗೆ', 'ನನಗೆ'–ಎಂಬ ದೃಷ್ಟಿಯಿಂದ ಎಲ್ಲರೂ ನೋಡುತ್ತಿರುವದರಿಂದ ಅದು ದೂಷಿತವಾಗಿರುತ್ತದೆ ; ಯಾರೂ ಕಾಣದಂತೆ ಗುಟ್ಟಿನಲ್ಲಿ ಅನ್ನವನ್ನುಂಡರೂ ಈ ದೃಷ್ಟಿದೋಷವು ತಪ್ಪಿದ್ದಲ್ಲ. ಏಕೆಂದರೆ ಮನುಷ್ಯನ ದುಷ್ಕೃತವು ಅವನ ಅನ್ನವನ್ನೇ ಆಶ್ರಯಿಸಿಕೊಂಡು ಇರುತ್ತದೆ ; ಆದ್ದರಿಂದ ಅದನ್ನು ಅನೇಕರಿಗೆ ಸಂವಿಭಾಗಮಾಡಿ ತಾನೂ ತೆಗೆದುಕೊಳ್ಳುವದೇ ಯುಕ್ತ ಎಂದು ಧರ್ಮಶಾಸ್ತ್ರಗಳು ಹೇಳುತ್ತಿವೆ. ಹೀಗೆ ಸರ್ವರಿಗೂ ಸಮವಾಗಿ ಹಂಚಿಕೊಡುವದಕ್ಕೆ ತಕ್ಕ ಅನ್ನವೆಂದರೆ ಈ ಬ್ರಹ್ಮಜ್ಞಾನವೊಂದೇ ಆಗಿರುತ್ತದೆ. ಪರಮಾತ್ಮನ ಅನುಗ್ರಹದಿಂದ ನಮ್ಮ ಇಂದ್ರಿಯಗಳೂ ಮನಸ್ಸುಗಳೂ ಶುದ್ಧವಾಗಬೇಕು ; ನಮಗೆ ಒಳ್ಳೆಯ ಬುದ್ಧಿ ಇರಬೇಕು, ಪ್ರತ್ಯಗ್

ವೃಷ್ಟಿಯು ಬರಬೇಕು, ಬ್ರಹ್ಮಜ್ಞಾನವಾಗಬೇಕು. ನಾನು ಉಣ್ಣುವ ಅನ್ನ, ಕುಡಿಯುವ ನೀರು, ಸೇವಿಸುವ ವಾಯು, ಮಾಡುವ ಆಲೋಚನೆ—ಎಲ್ಲವೂ ಆ ಭಗವಂತನ ಅನುಗ್ರಹವೇ ಎಂಬ ಬುದ್ಧಿಯು ನಮ್ಮಲ್ಲಿ ನೆಲೆನಿಲ್ಲಲಿ! ಎಲ್ಲೆಲ್ಲಿಯೂ ಆ ಪರಮೇಶ್ವರನನ್ನೇ ಕಾಣುವ ದೃಷ್ಟಿಯು ನಮಗೆ ಲಭಿಸಲಿ!

'ಈಶಾವಾಸ್ಯಮಿದಂ ಸರ್ವಮ್' ಎಂಬ ಈ ದೃಷ್ಟಿಯು ನಮ್ಮ ದೇಶದ್ದು; ತ್ಯಾಗವೈರಾಗ್ಯಗಳಿಂದ ಆತ್ಮರಕ್ಷಣೆಮಾಡಿಕೊಂಡು ಜ್ಞಾನನಿಷ್ಠರಾಗಿರುವದೆಂಬ ಧ್ಯೇಯವು ನಮ್ಮ ದೇಶದ್ದು. ಅದಕ್ಕಾಗಿ ಹೆಮ್ಮೆಪಡೋಣ, ಅದರಂತೆ ನಡೆಯಲು ಪ್ರಯತ್ನಿಸೋಣ. ಪ್ರಪಂಚವೆಲ್ಲವೂ ಪರಮಾತ್ಮನ ಸಂಕಲ್ಪದಂತೆಯೇ ನಡೆಯುತ್ತಿರುವದು; ಅದರಲ್ಲಿ ಕಾಣುವ ಪ್ರಕೃತಿನಿಯಮಗಳೆಲ್ಲವೂ ಆ ಪರಮಾತ್ಮನ ನಿಯಮಗಳೇ. ಆದ್ದರಿಂದ ಆತನ ಕಟ್ಟಳೆಯಂತೆ ನಡೆಯುವದಕ್ಕೆ ನಾವೆಲ್ಲರೂ ಪ್ರಯತ್ನಿಸಬೇಕು. ಈ ದಕ್ಷಿಣದೇಶದಲ್ಲಿರುವ ನಾವು 'ರಾಮಕ್ಷೇತ್ರೇ' ಎಂದು ಸಂಕಲ್ಪದಲ್ಲಿ ಹೇಳುತ್ತಿರುವೆವು. ರಾಮನು ಸತ್ಯಧರ್ಮಗಳನ್ನು ಜನರಿಗೆ ತಿಳಿಸಿಕೊಟ್ಟ ಪರಮಾತ್ಮನು; ಇದು ಸತ್ಯಧರ್ಮಗಳ ಕ್ಷೇತ್ರವು. ಭರತವರ್ಷ, ಭರತಖಂಡ—ಎಂಬ ಮಾತುಗಳು ಯಾವ ಸಂಸ್ಕೃತಿಯ ನೆನಪುಕೊಡುತ್ತವೆಯೋ ಆ ಅಧ್ಯಾತ್ಮವಿದ್ಯೆಯೇ ನಮ್ಮ ಸಂಸ್ಕೃತಿ. ಈ ಸಂಸ್ಕೃತಿಯನ್ನು ನಾವೆಲ್ಲರೂ ಕಾಪಾಡಿಕೊಳ್ಳೋಣ, ಪ್ರಚಾರಗೊಳಿಸೋಣ! ನಮಗೆಲ್ಲ ಸುಖಶಾಂತಿಯಾಗುವದಕ್ಕೆ ನಾವೆಲ್ಲರೂ ಪರಮಾತ್ಮನನ್ನೇ ಹಿಡಿಯಬೇಕು. ಪರಮಾತ್ಮನ ಅಸ್ತಿತ್ವದಲ್ಲಿ ಎಲ್ಲರಿಗೂ ವಿಶ್ವಾಸವಿರಲಿ! 'ಯಾರು ನನ್ನನ್ನೇ ಅನನ್ಯಭಕ್ತಿಯಿಂದ ಭಜಿಸುವರೋ ಅವರು ನನ್ನಲ್ಲಿಯೇ ಇರುವರು, ನಾನೂ ಅವರಲ್ಲಿಯೇ ಇರುವೆನು' ಎಂದು ಭಗವಂತನು ಆಶ್ವಾಸನವನ್ನು ಕೊಟ್ಟಿರುತ್ತಾನೆ. 'ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ ವಿನ್ದತೇಽಮೃತಮ್' ಪರಮಾತ್ಮನಿಂದಲೇ ಸ್ವಾಭಾವಿಕವಾದ ನಿತ್ಯವಾದ ಬಲವು ಸಿಕ್ಕುವದು, ಆತ್ಮನಿಂದಲೇ ಅಮೃತತ್ವವು ದೊರೆಯುವದು—ಎಂಬ ನಂಬಿಕೆಯು ನಮ್ಮನ್ನು ಬಿಟ್ಟಗಲದಿರಲಿ! ಧನದ ರಾಶಿಯಿಂದಾಗಲಿ, ಸೇನಾಸ್ತ್ರಶಸ್ತ್ರಗಳ ಸಂಗ್ರಹದಿಂದಲಾಗಲಿ, ಪ್ರಬಲರಾಷ್ಟ್ರಗಳ ಸಹಾಯದಿಂದಲಾಗಲಿ, ಮಂತ್ರತಂತ್ರಗಳಿಂದಾಗಲಿ, ಔಷಧಿವಿಶೇಷಗಳ ಮಹಿಮೆಯಿಂದಲಾಗಲಿ, ತಪಸ್ಸಿನಿಂದಲಾಗಲಿ, ಯೋಗಸಿದ್ಧಿಗಳಿಂದಾಗಲಿ

ಸಿಕ್ಕುವ ಬಲವು ಯಾವದೂ ನಿತ್ಯವಲ್ಲ; ಯಾವದೂ ಮೃತ್ಯುವಿನಿಂದ ನಮ್ಮನ್ನು ಬಿಡಿಸುವದಕ್ಕೆ ಸಾಕಾಗಲಾರದು. ಪರಮಾತ್ಮನಲ್ಲಿ ನಿಷ್ಠೆಯನ್ನು ಪಡೆಯುವದರಿಂದಲೇ ಆ ಧೈರ್ಯವೂ, ಮೃತ್ಯುವನ್ನು ಎದುರಿಸುವ ಕೆಚ್ಚೆದೆಯೂ ದೊರಕುವವು. ಪರಮಾತ್ಮನು ಕೊಟ್ಟಿರುವ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ– ಇವುಗಳನ್ನು ಸದ್ವಿನಿಯೋಗಮಾಡಿ ಸತ್ಕರ್ಮಭಕ್ತಿಧ್ಯಾನಾದಿಗಳಿಂದ ಆತನನ್ನೇ ಭಜಿಸೋಣ! ಆಧ್ಯಾತ್ಮವಿದ್ಯೆಯೇ ನಮ್ಮ ಉಸಿರಾಗಿರಲಿ! ಅದಿದ್ದರೆ ನಾವು ಇರುವೆವು; ಇಲ್ಲದಿದ್ದರೆ ಇಲ್ಲ. ಸಕಲರೂ ಈ ಆತ್ಮವಿದ್ಯೆಯಲ್ಲಿ ವಿಶ್ವಾಸವನ್ನಿಟ್ಟು ಧರ್ಮಿಷ್ಠರಾಗಿ, ಭಕ್ತರಾಗಿ, ಪರಸ್ಪರ ಪ್ರೇಮವನ್ನು ಬೆಳೆಯಿಸಿಕೊಂಡು ಸರ್ವದಾ ಸುಖಿಗಳಾಗಿರಲಿ! ಹಾಗೆ ಆ ನಾರಾಯಣನ ಅನುಗ್ರಹವಾಗಲಿ!